ಭಗತ್‌ಸಿಂಗ್ ಪ್ರತಿಪಾದಿಸಿದ **ರಾಷ್ಟ್ರವಾದ ಮತ್ತು ಭಾರತೀಯ ಶಿಕ್ಷಣಕ್ಕೆ** ಅದು ಯಾವ ಅರ್ಥವನ್ನು ನೀಡುತ್ತದೆ

**Bhagath Singh’s version of nationalism and what it may mean for Indian education**

## ವಿಶೇಷ ಪ್ರಬಂಧ

ಇದು, ಮಾರ್ಚ್ 29 ರಂದು, ಬೆಂಗಳೂರಿನ ಅಜೀಂ ಪ್ರೇಮ್ ಜಿ ವಿಶ್ವವಿದ್ಯಾಲಯದಲ್ಲಿ, ಭಗತ್ ಸಿಂಗ್ ಹುತಾತ್ಮದಿನದ ವಾರ್ಷಿಕದ ಅಂಗವಾಗಿ ನೀಡಲಾದ ಉಪನ್ಯಾಸದ ಪಠ್ಯರೂಪ.

**ಅಮ್ಮನ್ ಮದನ್** ರವರು ಬೆಂಗಳೂರಿನ ಅಜೀಂ ಪ್ರೇಮ್ ಜಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ.

ಗೆಳೆಯರೇ, ಭಾರತದ ಮಹಾನ್ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರಾದ ಭಗತ್ ಸಿಂಗ್ ರನ್ನು ಸ್ಮರಿಸಲು ನಾವೆಲ್ಲರೂ ಇಲ್ಲಿ ಸೇರಿದ್ದೇವೆ. ಆದರೆ ಭಗತ್ ಸಿಂಗ್ ರವರನ್ನು ಕುರಿತು ಮಾತನಾಡಲು ಆರಂಭಿಸುವ ಮುನ್ನ ನಾನು ಇನ್ನಿಬ್ಬರು ಮಹಾನ್ ಭಾರತೀಯರನ್ನು ನೆನಪಿಸಿಕೊಳ್ಳಲು ಇಚ್ಚಿಸುತ್ತೇನೆ. ಅದರಲ್ಲಿ ಮೊದಲನೆಯವರು ಇಂದಿಗೂ ನಮ್ಮ ಜೊತೆಯಲ್ಲಿಯೇ ಇರತಕ್ಕಂಥ ಸುಧಾ ಭಾರದ್ವಾಜ್ ರವರು. ಸುಧಾ ಭಾರದ್ವಾಜ್ ರವರು ಕಾನ್ಪುರದ ಐ ಐ ಟಿ ಯ ಪದವೀಧರರಾಗಿದ್ದು, ತಮ್ಮ ಬದುಕಿನ ಕಳೆದ ಮೂವತ್ತು ವರ್ಷಗಳ ಕಾಲ ರೈತರು ಮತ್ತು ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುವುದಕ್ಕಾಗಿ ವಕೀಲರಾಗಿ ಕೆಲಸ ಮಾಡಿದ್ದಾರೆ. ಕಳೆದ ವರ್ಷ ಭಗತ್ ಸಿಂಗ್ ಸ್ಮರಣೆಯ ಪ್ರಯುಕ್ತ ನಡೆದ ಇಂಥದೇ ಉಪನ್ಯಾಸದಲ್ಲಿ ಸುಧಾ ಭಾರದ್ವಾಜ್ ರವರು ಭಾಷಣಕಾರರಾಗಿದ್ದರು. ತಮ್ಮ ಉಪನ್ಯಾಸವಾದ ಒಂದೆರೆಡು ತಿಂಗಳಲ್ಲೇ ಅವರು ದೆಹಲಿಯಲ್ಲಿ ಬಂಧಿಸಲ್ಪಟ್ಟರು. ಈಗ ಅವರು ಒಬ್ಬ ಮಾವೋವಾದಿ ಉಗ್ರಗಾಮಿ ಎಂಬ ಆಪಾದನೆಯ ಮೇಲೆ ಪುಣೆಯ ಜೈಲಿನಲ್ಲಿದ್ದಾರೆ. ಕಳೆದ ವರ್ಷವಷ್ಟೇ ಅವರ ಉಪನ್ಯಾಸ ಕೇಳಿದ್ದ ನಾನು, ಈ ದೇಶದಲ್ಲಿನ ಅನೇಕ ಜನರಂತೆ ಈ ಆಪಾದನೆಯನ್ನು ನಂಬಲು ಕಷ್ಟಪಡುತ್ತಿದ್ದೇನೆ. ನಮ್ಮ ನ್ಯಾಯಾಂಗ ವ್ಯವಸ್ಥೆಯು ಸುಳ್ಳಿನಿಂದ ಸತ್ಯವನ್ನು ಬೇರ್ಪಡಿಸುತ್ತದೆ ಎಂಬ ಪ್ರಾಮಾಣಿಕ ಭರವಸೆಯನ್ನು ಹೊಂದಿದ್ದೇನೆ.

ನಾವು ಭಗತ್ ಸಿಂಗ್ ರ ಬಗ್ಗೆ ಮಾತನಾಡುವ ಮುನ್ನ ಸ್ಮರಿಸಲೇಬೇಕಾದ ಎರಡನೆಯ ಮಹಾನ್ ಭಾರತೀಯರೆಂದರೆ ಬಿ. ಆರ್. ಅಂಬೇಡ್ಕರ್ ಅವರು. ಇಪ್ಪತ್ತನೇ ಶತಮಾನದ ಪ್ರಥಮಾರ್ಧದ ಮಹಾನ್ ಬುದ್ಧಿಜೀವಿಗಳಲ್ಲಿ ಬಿ. ಆರ್. ಅಂಬೇಡ್ಕರ್ ಒಬ್ಬರು ಎಂದು ಹೇಳಬಹುದು ಮತ್ತು ಅವರು ನಾಯಕರ ಆರಾಧನೆಯ ಕುರಿತು ನಮ್ಮನ್ನು ಎಚ್ಚರಿಸಿರುವುದರಿಂದ ಅವರು ಸ್ಮರಣಾರ್ಹರು. ಭಗತ್ ಸಿಂಗ್ ರ ಬಗ್ಗೆ ಮಾತನಾಡುವಾಗ ತೆಗೆದುಕೊಳ್ಳಬೇಕಾದ ಮುಖ್ಯ ಮುನ್ನೆಚ್ಚರಿಕೆ ಇದು. ಸ್ವತಃ ಭಗತ್ ಸಿಂಗ್ ರೇ ನಾಯಕರ ಆರಾಧನೆಯ ವಿರುದ್ಧವಾಗಿದ್ದು, ಗಾಂಧೀಜಿ, ನೆಹರು, ತಿಲಕ್ ಮತ್ತು ಆ ಕಾಲದ ಯಾವುದೇ ಮಹಾನ್ ನಾಯಕರನ್ನು ಆರಾಧಿಸಲು ನಿರಾಕರಿಸಿದರು. ನಾಯಕರ ಆರಾಧನೆಯ ಅಪಾಯಗಳ ಕುರಿತು ಅಂಬೇಡ್ಕರ್ ಅವರು ಬಹಳ ಸುಂದರವಾದ ರೀತಿಯಲ್ಲಿ ನಮ್ಮನ್ನು ಎಚ್ಚರಿಸಿದ್ದಾರೆ.

> ”ನಾಯಕನೊಬ್ಬನನ್ನು ಕುರಿತು ಮೇರೆಯಿಲ್ಲದ ಮೆಚ್ಚುಗೆಯನ್ನು ಅಭಿವ್ಯಕ್ತಿಸುವುದು ಎಂಬ ಅರ್ಥದಲ್ಲಿ ನಾಯಕನನ್ನು ಆರಾಧಿಸುವುದು ಒಂದು ರೀತಿ. ಆದರೆ ನಾಯಕ ಹೇಳಿದ್ದೆಲ್ಲವನ್ನೂ ಪಾಲಿಸುವುದು ಎಂಬ ಅರ್ಥದಲ್ಲಿ ಅದು ಸಂಪೂರ್ಣ ಬೇರೆಯದೇ ಪ್ರಕಾರದ ನಾಯಕನ ಆರಾಧನೆಯಾಗಿದೆ. ಮೊದಲನೆಯ ಮಾದರಿಯಲ್ಲಿ ಯಾವುದೇ ದೋಷವಿಲ್ಲ ಆದರೆ ಎರಡನೆಯದು ವಿನಾಶಕಾರಿಯಾದದ್ದು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. . .ಮೊದಲನೆಯದು ಒಬ್ಬ ವ್ಯಕ್ತಿಯ ಚಿಂತನಾಶೀಲ ಬುದ್ಧಿಮತ್ತೆಯನ್ನು, ಕ್ರಿಯಾಶೀಲತೆಯ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದಿಲ್ಲ. ಆದರೆ ಎರಡನೆಯದು ಮನುಷ್ಯನನ್ನುಮೂರ್ಖನನ್ನಾಗಿಸುತ್ತದೆ”
> -ಅಂಬೇಡ್ಕರ್. ಬಿ. ಆರ್. (1989)

ನಾವು ಭಗತ್ ಸಿಂಗ್ ರನ್ನು ನಾಯಕನ ಆರಾಧನೆಯ ಮಾದರಿಯಲ್ಲಿ ನೋಡುವುದು ಬೇಡ. ಬದಲಿಗೆ ಅಂಬೇಡ್ಕರ್ ಹೇಳುವಂತೆ ಮಾನವತೆಯಲ್ಲಿರುವ ಎಲ್ಲ ಉದಾತ್ತತೆಯ ಹುಡುಕಾಟವಾಗಿ ನೋಡೋಣ. ಯಾವುದು ಉದಾತ್ತ ಎಂದು ಕಾಣುತ್ತದೋ ಅದನ್ನು ಮೆಚ್ಚಿಕೊಳ್ಳೋಣ ಮತ್ತು ಯಾವುದು ಹಾಗಿರುವುದಿಲ್ಲವೋ ಅದರಿಂದ ದೂರವಿರೋಣ.

ಭಗತ್ ಸಿಂಗ್ ರು ಪಂಜಾಬಿನ ಲ್ಯಾಲ್ ಪುರ್ ಜಿಲ್ಲೆಯಲ್ಲಿ, 1907 ರಲ್ಲಿ ಜನಿಸಿದರು. ಆ ಊರು ಈಗ ಪಾಕಿಸ್ತಾನದಲ್ಲಿ ಇದ್ದು ಅದನ್ನು ಫೈಸಲಾಬಾದ್ ಎಂದು ಕರೆಯುತ್ತಾರೆ. ಭಗತ್ ಸಿಂಗ್ ರ ಕತೆ ನಮಗೆಲ್ಲರಿಗೂ ಗೊತ್ತು. ಭಗತ್ ಸಿಂಗ್, ರಾಜ್ ಗುರು ಮತ್ತು ಅವರ ಅನೇಕ ಸಂಗಾತಿಗಳು ಲಾಲಾ ಲಜಪತ್ ರಾಯ್ ರವರ ಸಾವಿಗೆ ಸೇಡು ತೀರಿಸಿಕೊಳ್ಳಲು ಯೋಜನೆ ಹೆಣೆದಿದ್ದರು. ಲಾಲ ಲಜಪತ್ ರಾಯ್ ರವರು 1928 ರ ಅಕ್ಟೋಬರ್ 30 ರಂದು ಪೊಲೀಸ್ ಸೂಪರಿಂಡೆಂಟರಾಗಿದ್ದ ಜಾಕ್

ಸ್ಕಾಟ್ ಆದೇಶ ನೀಡಿದ್ದ ಲಾಠಿ ಚಾರ್ಜಲ್ಲಿ ಗಾಯಗೊಂಡಿದ್ದರು. ಲಾಲಾ ಲಜಪತ್ ರಾಯ್ ರವರು ನಂತರ 1928 ರ ನವೆಂಬರ್ 17 ರಂದು ಹೃದಯಾಘಾತದಿಂದ ತೀರಿಕೊಂಡಿದ್ದರು. ಭಗತ್ ಸಿಂಗ್ ಮತ್ತು ಇತರರು ಇದಕ್ಕೆ ಲಾಠಿಚಾರ್ಜ್ ಕಾರಣವೆಂದು ನಂಬಿದ್ದರು. ಸರಿಯಾಗಿ ಒಂದು ತಿಂಗಳ ನಂತರ ಭಗತ್ ಸಿಂಗ್ ಮತ್ತು ಶಿವರಾಮ್ ಹರಿ ರಾಜ್ ಗುರು ಅವರು, ಈತನೇ ಪೊಲೀಸ್ ಸೂಪರಿಂಟೆಂಡೆಂಟ್ ಜಾಕ್ ಸ್ಕಾಟ್ ಎಂದು ತಮ್ಮ ಕಾಮ್ರೇಡ್ ಒಬ್ಬರು ತೋರಿಸಿದ ಮನುಷ್ಯನೊಬ್ಬನ ಮೇಲೆ ದಾಳಿ ಮಾಡಿದರು. ಆದರೆ ಅವರು ಗುರುತಿಸಿದ ವ್ಯಕ್ತಿ ತಪ್ಪಾಗಿ, ಅವರು ಸ್ಕಾಟ್ ನ ಬದಲು ಸಹಾಯಕ ಪೊಲೀಸ್ ಸೂಪರಿಂಟೆಂಡೆಂಟ್ ಆಗಿದ್ದ ಜಾನ್ ಪೊಯೊಂಟ್ಸ್ ಸಾಂಡರ್ಸ್ (22 ವಯಸ್ಸು) ಎಂಬಾತನನ್ನು 1928 ರ ಡಿಸೆಂಬರ್ 28 ರಂದು ಹತ್ಯೆಗೈದರು. ಸಾಯುವ ಹೊತ್ತಿಗೆ ಸಾಂಡರ್ಸ್ ಭಾರತಕ್ಕೆ ಬಂದು ಇನ್ನು ಒಂದು ವರ್ಷ ಪೂರ್ತಿಯಾಗಿರಲಿಲ್ಲ. ಅವರನ್ನು ಅಟ್ಟಿಸಿಕೊಂಡು ಬರಲು ಯತ್ನಿಸಿದ  ಸಾಂಡರ್ಸ್ ನ ಸಿಖ್ ಮುನ್ಸಿಯಾಗಿದ್ದ ಚನನ್ ಸಿಂಗ್ ನನ್ನು ಚಂದ್ರಶೇಖರ್ ಆಜಾದ್ ರು ಕೊಂದರೆಂದು ನಂಬಲಾಗಿದೆ. ಬ್ರಿಟಿಷರ ವಿರುದ್ದ ಪ್ರತಿಭಟಿಸಲು ಜನಸಮುದಾಯವನ್ನು ಬಡಿದೆಬ್ಬಿಸಬೇಕು ಎಂಬ ಉದ್ದೇಶದಿಂದ ಈ ಕೊಲೆಯನ್ನು ಯೋಜಿಸಲಾಗಿದ್ದರೂ, ಆ ಕಾಲಘಟ್ಟದಲ್ಲಿ ಈ ಗುರಿ ವಿಫಲವಾದಂತೆ ಕಾಣುತ್ತದೆ. ನೌಜವಾನ್ ಭಾರತ್ ಸಭಾ ಗೆ ಹಾಜರಾಗುತ್ತಿದ್ದವರ ಸಂಖ್ಯೆಯು ವಾಸ್ತವದಲ್ಲಿ ಹಠಾತ್ತಾಗಿ ಕುಸಿದಿತ್ತು. ಬಹಳ ಕಾಲದ ನಂತರ ಭಗತ್ ಸಿಂಗ್ ರು ಜೈಲಿನಲ್ಲಿದ್ದಾಗ  ಅವರು ದೇಶದ ಗಮನವನ್ನು, ವಿಶೇಷವಾಗಿ ದೇಶದ ಉತ್ತರ ಭಾಗದಲ್ಲಿ ಆಕರ್ಷಿಸಲಾರಂಭಿಸಿದರು.

ಭಗತ್ ಸಿಂಗ್ ಮತ್ತು ಬಟುಕೇಶ್ವರ ದತ್ತರು 1929 ರ ಏಪ್ರಿಲ್ 8 ರಂದು ದೆಹಲಿಯ ಶಾಸನಸಭೆಯಲ್ಲಿ ಎರಡು ಸಣ್ಣ ಬಾಂಬ್ ಗಳನ್ನು ಎಸೆದರು. ವಸಾಹತುಶಾಹಿಯ ವಿರುದ್ದ ಜನತೆ ರೊಚ್ಚಿಗೆದ್ದು ಪ್ರತಿಭಟಿಸಲಿ ಎಂದು ಉದ್ದೇಶಪೂರ್ವಕವಾಗಿ ಜನರ ಭಾವನೆಯನ್ನು ಕೆರಳಿಸಲಿಕ್ಕಾಗಿ ಇದನ್ನು ಮಾಡಲಾಗಿತ್ತು. ಇದರಲ್ಲಿ ಯಾರು ಭಾಗವಹಿಸಬೇಕು ಎಂಬ ಬಗ್ಗೆ ಪಿತೂರಿಗಾರರ ನಡುವೆ ಒಂದಿಷ್ಟು ಚರ್ಚೆ ನಡೆಯಿತು ಮತ್ತು ಪೊಲೀಸರು ಸಾಂಡರ್ಸ್ ಮತ್ತು ಚನನ್ ಸಿಂಗ್ ರ ಕೊಲೆಯಲ್ಲಿ ಭಾಗಿಯಾಗಿದ್ದ ಭಗತ್ ಸಿಂಗ್ ರನ್ನು ಗುರುತು ಹಿಡಿಯಬಹುದು ಎಂಬ ಆತಂಕವೂ ವ್ಯಕ್ತವಾಯಿತು. ಆದರೆ ಭಗತ್ ಸಿಂಗ್ ರು ಅವರಲ್ಲೆಲ್ಲಾ ಅತ್ಯುತ್ತಮ ವಾಗ್ಮಿ ಮತ್ತು ಸ್ಪಷ್ಟತೆಯನ್ನುಳ್ಳ ವ್ಯಕ್ತಿಯಾಗಿದ್ದರು.

ವಿಚಾರಣೆಯು ಜನರನ್ನು ಉದ್ದೀಪನಗೊಳಿಸಬೇಕೆಂದರೆ, ತಾವೇ ಅದಕ್ಕೆ ಅತ್ಯುತ್ತಮ ವ್ಯಕ್ತಿ ಎಂದು ಅವರು ಬಲವಾಗಿ ವಾದಿಸಿದರು.

ಬ್ರಿಟಿಷ್ ವಸಾಹತುಶಾಹಿ ಪ್ರಭುತ್ವದ ಆದೇಶದ ಮೇರೆಗೆ 1931 ರ ಮಾರ್ಚ್ 23 ರಂದು ಗಲ್ಲುಶಿಕ್ಷೆಯ ಮೂಲಕ ಭಗತ್‌ಸಿಂಗ್ ಹತರಾದರು. ತಮ್ಮ ಸಾವು ಒಂದು ಪ್ರತಿಭಟನೆಯ ಘೋಷಣೆಯಾಗಬೇಕು ಮತ್ತು ಭಾರತದ ಜನರನ್ನು ಬಡಿದೆಬ್ಬಿಸಲು ಸಾಧನವಾಗಬೇಕು ಎಂದೇ ಅವರು ಯೋಜನೆ ಹಾಕಿದ್ದರು. ಭಾರತದ ಗವರ್ನರ್ ಗೆ ಬರೆದ ತಮ್ಮ ಕೊನೆಯ ಪತ್ರದಲ್ಲಿ ಭಗತ್‌ಸಿಂಗ್, ಸುಖದೇವ್ ಮತ್ತು ರಾಜ್ ಗುರು ವ್ಯಂಗ್ಯ ಮತ್ತು ವಿಡಂಬನೆ ತುಂಬಿ ತುಳುಕುತ್ತಿದ್ದ ಮಾತುಗಳಲ್ಲಿ ತಮ್ಮನ್ನು ನೇಣಿಗೆ ಹಾಕಬಾರದೆಂದೂ ಗುಂಡು ಹೊಡೆದು ಸಾಯಿಸಬೇಕೆಂದೂ ಕೇಳಿಕೊಂಡರು.

"ಇನ್ನು ನಮ್ಮ ಮುಂದಿನ ಗತಿ ಏನಾಗುತ್ತದೆ ಎಂಬ ಪ್ರಶ್ನೆಯ ಬಗ್ಗೆ ಇದಿಷ್ಟನ್ನು ಹೇಳಲು ನಮಗೆ ಅವಕಾಶ ಕೊಡಿ. ನೀವು ನಮ್ಮನ್ನು ಕೊಲ್ಲಲಿಚ್ಛಿಸಿದ ಮೇಲೆ ಖಂಡಿತವಾಗಿ ಕೊಂದೇ ತೀರುತ್ತೀರಿ. ನಿಮ್ಮ ಕೈನಲ್ಲಿ ಅಧಿಕಾರವಿದೆ ಮತ್ತು ಈ ಜಗತ್ತಿನಲ್ಲಿ ಅಧಿಕಾರವೇ ಅತಿದೊಡ್ಡ ಸಮರ್ಥನೆಯಾಗಿದೆ. "ಅಧಿಕಾರವಿದ್ದವರು ಏನು ಮಾಡಿದರೂ ನಡೆಯುತ್ತದೆ" ಎಂಬ ನಾಣ್ಣುಡಿಯೇ ನಿಮ್ಮ ಮೂಲಮಂತ್ರವಾಗಿದೆ ಎನ್ನುವುದು ನಮಗೆ ಗೊತ್ತು. ನಮ್ಮ ಇಡೀ ವಿಚಾರಣೆಯೇ ಈ ಮಾತಿಗೆ ಸಾಕ್ಷಿ.

ನಾವು ಹೇಳಬೇಕೆಂದು ಇದ್ದದ್ದು ಇಷ್ಟೇ, ನಿಮ್ಮ ನ್ಯಾಯಾಲಯದ ತೀರ್ಪಿನ ಪ್ರಕಾರ ನಾವು ನಿಮ್ಮ ಮೇಲೆ ಯುದ್ಧವನ್ನು ಸಾರಿದವರು ಮತ್ತು ಅದರಿಂದಾಗಿ ಯುದ್ಧ ಖೈದಿಗಳಾಗಿರುವವರು. ನಮ್ಮನ್ನು ಹಾಗೆಯೇ ನಡೆಸಿಕೊಳ್ಳಬೇಕೆಂದು ನಾವು ಆಗ್ರಹಿಸುತ್ತೇವೆ. ಎಂದರೆ ನಮ್ಮನ್ನು ಗಲ್ಲಿಗೆ ಹಾಕದೆ ಗುಂಡು ಹೊಡೆದು ಸಾಯಿಸಬೇಕೆಂದು ಒತ್ತಾಯಿಸುತ್ತೇವೆ. ಆಗ ನೀವು ನಿಮ್ಮ ನ್ಯಾಯಾಲಯ ಹೇಳಿದ ರೀತಿಯಲ್ಲೇ ನಡೆಯಲಿಚ್ಛಿಸುತ್ತೀರಿ ಎಂಬುದನ್ನು ಸಾಬೀತುಪಡಿಸಿದಂತಾಗುತ್ತದೆ.

ಮೃತ್ಯುದಂಡನೆಯನ್ನು ಜಾರಿಗೊಳಿಸಲು ತುಕಡಿಯೊಂದನ್ನು ಕಳಿಸಿಕೊಡುವಂತೆ ನೀವು ಮಿಲಿಟರಿಗೆ ಆದೇಶಿಸಬೇಕು ಎಂದು ಕೋರುತ್ತೇವೆ ಮತ್ತು ನೀವು ಹಾಗೆ ಮಾಡುತ್ತೀರಿ ಎಂದು ನಾವು ಆಶಿಸುತ್ತೇವೆ."

ನಿಮ್ಮ,

ಭಗತ್ ಸಿಂಗ್, ರಾಜಗುರು, ಸುಖದೇವ್

## ಭಗತ್ ಸಿಂಗ್ ರ ಶಿಕ್ಷಣ

ಈ ಪತ್ರದಲ್ಲಿರುವ ಧಾರ್ಷ್ಟ್ಯದಿಂದ ನಾನು ಬೆರಗಾಗಿದ್ದೇನೆ. ಆತ ಇನ್ನೊಂದು ತಿಂಗಳಲ್ಲೋ ಏನೋ ಸಾಯುವವರಿದ್ದರು. ಆದರೂ ಸಹ ಆತ ಬ್ರಿಟಿಷರಿಗೆ ಹೀಗೆ ನಿರ್ಭೀತನಾಗಿ ಸೆಡ್ಡು ಹೊಡೆಯುತ್ತಿದ್ದರು. ಇಂತಹ ವ್ಯಕ್ತಿಯನ್ನು ಸೃಷ್ಟಿಸಿದ ಪ್ರಕ್ರಿಯೆ ಎಂಥದು?

ಭಗತ್ ಸಿಂಗ್ ರಾಜಕೀಯ ಕಾರ್ಯಕರ್ತರ ಕುಟುಂಬವೊಂದರಿಂದ ಬಂದವರು. ಅವರ ತಂದೆಯಾಗಿದ್ದ ಕಿಶನ್ ಸಿಂಗ್ ರವರು ಕ್ರಾಂತಿಕಾರಿ ಸಂಘಟನೆಗಳನ್ನು ಬೆಂಬಲಿಸುವುದರಲ್ಲಿ ತೊಡಗಿಕೊಂಡಿದ್ದರು ಮತ್ತು ಅನೇಕ ರೀತಿಯ ಸಮಾಜ ಸುಧಾರಣಾ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು. ಅವರ ಚಿಕ್ಕಪ್ಪನಾಗಿದ್ದ ಅಜಿತ್ ಸಿಂಗ್ ರವರು ಇನ್ನೂ ಹೆಚ್ಚಿನ ಆಕ್ರಮಣಶೀಲ ಮತ್ತು ಉಗ್ರ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದು, 1907 ರಲ್ಲಿ ಲಾಲಾ ಲಜಪತ್ ರಾಯ್ ಅವರೊಂದಿಗೆ ಮಂಡಾಲೆ ಜೈಲಿಗೆ ಕಳಿಸಲ್ಪಟ್ಟಿದ್ದರು. ರೈತರನ್ನು ಸಂಘಟಿಸುವ ಸಾರ್ವಜನಿಕ ಆಂದೋಲನಗಳಲ್ಲಿ ಮತ್ತು ಬ್ರಿಟಿಷ್ ಕಾನೂನುಗಳ ವಿರುದ್ಧದ ಪ್ರತಿಭಟನೆಯಲ್ಲಿ ಈ ಚಿಕ್ಕಪ್ಪ ಭಾಗವಹಿಸಿದ್ದರು. ಕೊನೆಗೆ ಅವರನ್ನು ದೇಶದಿಂದಲೇ ಗಡಿಪಾರು ಮಾಡಲಾಯಿತು. ಹೀಗಾಗಿ ಭಗತ್ ಸಿಂಗ್ ರನ್ನು ರೂಪಿಸಿದ ಅಂಶಗಳಲ್ಲಿ ಇಂತಹ ಕುಟುಂಬವೊಂದು ಒದಗಿಸಿದ ಸ್ಫೂರ್ತಿ ಮತ್ತು ವ್ಯಕ್ತಿತ್ವ ಮಾದರಿಗಳು ಭಾಗಶಃ ಪಾತ್ರವನ್ನಂತೂ ವಹಿಸಿರಲೇ ಬೇಕು.

ಭಗತ್ ಸಿಂಗ್ ಕಲಿತ ಕಾಲೇಜು ಸಹ ನಿಜಕ್ಕೂ ಅಸಾಮಾನ್ಯವಾದದ್ದೇ ಆಗಿತ್ತು ಮತ್ತು ಅಂತಹ ಮನುಷ್ಯನ ನಿರ್ಮಾಣದಲ್ಲಿ ಅದು ಮಹತ್ತರವಾದ ಕೊಡುಗೆಯನ್ನು ಕೊಟ್ಟಿರಲೇ ಬೇಕು.

ಒಂದು ಹಳ್ಳಿಗಾಡಿನಿಂದ ಬಂದಿದ್ದ ಆತನನ್ನು, ಅಂದಿನ ಪಂಜಾಬ್ ಪ್ರಾಂತ್ಯದ ಜನರಿಂದ ತುಂಬಿ ಗಿಜಿಗಿಜಿಗುಟ್ಟುವ ಮಹಾನಗರ ಲಾಹೋರ್ ಗೆ ಓದಲು ಕಳಿಸಲಾಯಿತು. ಆಗಿನ ಕಾಲದಲ್ಲಿ ನಾವಿಂದು 11ನೆಯ ಮತ್ತು 12 ನೆಯ ವರ್ಷ ಎಂದು ಕರೆಯುವ ತರಗತಿಗಳೂ ಕಾಲೇಜಿಗೆ ಸೇರಿರುತ್ತಿದ್ದವು. ಆತ ಒಂದು ವರ್ಷವನ್ನು ಡಿಎವಿ ಕಾಲೇಜಿನಲ್ಲಿ ಕಳೆದು ನಂತರ ಒಂದು ಅತ್ಯಂತ ಮಹತ್ವದ ಕಾಲೇಜಿಗೆ ವರ್ಗಾವಣೆ ಪಡೆದುಕೊಂಡರು. ಭಗತ್ ಸಿಂಗ್ ಕೆಲವು ಕಾಲ ಲಾಹೋರಿನ "ಪಂಜಾಬ್ ಕ್ವೌಮಿ ವಿದ್ಯಾಪೀಠ" ಅಥವಾ ನ್ಯಾಷನಲ್ ಕಾಲೇಜ್ ನಲ್ಲಿ ಓದಿದರು. ಬ್ರಿಟಿಷರಿಂದ ಪ್ರಾಯೋಜಿತವಾದ ಶಿಕ್ಷಣವನ್ನು ಬಿಟ್ಟು ಬರಲು ಆಹ್ವಾನಿಸುತ್ತಾ ಸ್ವಾತಂತ್ರ್ಯ ಸಂಗ್ರಾಮದ ಭಾಗವಾಗಿ ಉದಯಿಸಿದ್ದ ನ್ಯಾಷನಲ್ ಕಾಲೇಜುಗಳ ಸರಣಿಗೆ ಇದೂ ಸೇರಿತ್ತು. ಸಾಂಪ್ರದಾಯಿಕವಾದ ಬ್ರಿಟಿಷ್ ಶಿಕ್ಷಣದ ಮಾದರಿಯು ಜನತೆಯನ್ನು ಅಧಿಕಾರದ ಚಕ್ರವ್ಯೂಹದೊಳಕ್ಕೆ ಎಳೆದುಕೊಂಡು ಬಿಡುತ್ತದೆ ಎಂದು ಗಾಂಧಿ ಮತ್ತಿತರ ರಾಷ್ಟ್ರೀಯ ನಾಯಕರು ಘೋಷಿಸಿದ್ದರು. ಜಾಮಿಯ ಮಿಲಿಯ, ಕಾಶಿ ವಿದ್ಯಾಪೀಠ, ಪಂಜಾಬ್ ಕ್ವೌಮಿ ವಿದ್ಯಾಪೀಠ ಮುಂತಾದವೂ ಸೇರಿದಂತೆ, ಅನೇಕ ರಾಷ್ಟ್ರೀಯ ಸಂಸ್ಥೆಗಳನ್ನು ಅವರು ಎಳೆಯ

ವಯಸ್ಸಿನವರಿಗೆ, ಶಿಕ್ಷಕರಿಗೆ ಹಾಗೂ ತಜ್ಞರಿಗೆ ಪರ್ಯಾಯವಾಗಿ ಸ್ಥಾಪಿಸಿದ್ದರು. ಲಾಹೋರಿನ ನ್ಯಾಷನಲ್ ಕಾಲೇಜು ಭಾಯಿ ಪರಮಾನಂದ ಮತ್ತು ಲಾಲಾ ಲಜಪತ್ ರಾಯ್ ರಂತಹ ಆರ್ಯ ಸಮಾಜಿಗಳ ಬಲವಾದ ಪ್ರಭಾವಕ್ಕೆ ಒಳಪಟ್ಟ ಸಂಸ್ಥೆಯಾಗಿತ್ತು. ಇಲ್ಲಿ ಭಗತ್ ಸಿಂಗ್ ರು, ರಷ್ಯನ್ ಕ್ರಾಂತಿಯ ಬಗ್ಗೆ ಮತ್ತು ಜಾರ್ ನ ವಿರುದ್ಧದ ಯುದ್ಧದ ಯಶಸ್ಸಿನ ಬಗ್ಗೆ ತನಗೆ ಹೇಳುತ್ತಿದ್ದ ಜಯಚಂದ್ರ ವಿದ್ಯಾಲಂಕಾರ್ ಮುಂತಾದ ಶಿಕ್ಷಕರಿಂದ ಸ್ಪೂರ್ತಿಯನ್ನು ಪಡೆದುಕೊಂಡರು. ವಿದ್ಯಾರ್ಥಿಗಳು ಗರಿಬಾಲ್ಡಿ ಮತ್ತು ಮ್ಯಾಜಿನಿಯವರಂಥ ಯುರೋಪಿನ ಕ್ರಾಂತಿಕಾರಿಗಳ ಬಗ್ಗೆಯೂ ತಿಳಿದುಕೊಂಡರು. ಐರ್ಲೆಂಡ್ ನ ಸಿನ್ ಫೆಯಿನ್ ಮತ್ತು ಅಂತಿಮವಾಗಿ ಅದು ಇಂಗ್ಲಿಷರಿಂದ ಬಿಡುಗಡೆ ಪಡೆಯಲು ನಡೆಸಿದ ವಿಜಯಿ ಹೋರಾಟದ ಬಗ್ಗೆಯೂ ತಿಳಿದುಕೊಂಡರು. ಇದೆಲ್ಲವೂ ಅವರಿಗೆ ಗಾಢವಾದ ಸ್ಪೂರ್ತಿಯನ್ನು ನೀಡಿದವು.

ಅನೇಕ ಬಾರಿ ನಾವು ಶೈಕ್ಷಣಿಕ ಸಂಸ್ಥೆಗಳ ಮೂಲ ಸೌಕರ್ಯಗಳ ಅಗತ್ಯತೆಯ ಬಗ್ಗೆ ಕೇಳುತ್ತಿರುತ್ತೇವೆ. ಆದರೆ ಈ ಗಮನಾರ್ಹ ವಿದ್ಯಾಸಂಸ್ಥೆಯಲ್ಲಿ ಹೆಚ್ಚೂ ಕಡಿಮೆ ಏನೇನೂ ಇರಲಿಲ್ಲ. ಅವರಿಗೆ ಒಂದು ಗ್ರಂಥಾಲಯವೂ ಇರಲಿಲ್ಲ. ಶಿಕ್ಷಕರು ತಾವು ಸಾರ್ವಜನಿಕ ಗ್ರಂಥಾಲಯಗಳಿಂದ ತಂದಿದ್ದ ಪುಸ್ತಕಗಳ ಭಾಗಗಳನ್ನು ಓದಲು ವಿದ್ಯಾರ್ಥಿಗಳಿಗೆ ಹೇಳುತ್ತಿದ್ದರು. ಒಂದು ವಿದ್ಯಾ ಸಂಸ್ಥೆಗೆ ಬೇಕಾದ ಬಹಳ ಮುಖ್ಯವಾದ ಅಗತ್ಯತೆಯೆಂದರೆ ಶಿಕ್ಷಕರ ಗುಣಮಟ್ಟ ಮತ್ತು ಇದಕ್ಕೆ ಪಂಜಾಬ್ ಕ್ವೌಮಿ ವಿದ್ಯಾಪೀಠದಲ್ಲಿ ಯಾವ ಕೊರತೆಯೂ ಇರಲಿಲ್ಲ. ಶಿಕ್ಷಕರು ಉನ್ನತ ಬೌದ್ಧಿಕ ಮಟ್ಟಕ್ಕೆ ಸೇರಿದವರಾಗಿದ್ದು ವಿದ್ಯಾರ್ಥಿಗಳೊಡನೆ ಬಹಳ ಸ್ನೇಹಮಯವಾದ, ಚರ್ಚೆ ನಡೆಸುವ ಸಂಬಂಧವನ್ನು ಬೆಳೆಸಿಕೊಂಡಿದ್ದರು. ಭಗತ್ ಸಿಂಗ್ ರ ಪ್ರಾಂಶುಪಾಲರಾಗಿದ್ದ ಛಬಿಲ್ ದಾಸ್ ರವರು ತಮ್ಮ ವಿದ್ಯಾರ್ಥಿಗಳೊಂದಿಗೆ ತಮಗಿದ್ದ ಆತ್ಮೀಯ ಸಂಬಂದದ ಬಗ್ಗೆ ಬರೆದುಕೊಂಡಿದ್ದಾರೆ (ಭಕ್ಷಿ 1988:22-23). ಅವರುಗಳು ಬೆಳದಿಂಗಳ ರಾತ್ರಿಗಳನ್ನು ನದಿಯ ತೀರದಲ್ಲಿ ಕುಳಿತು ಅನೇಕ ವಿಷಯಗಳ ಬಗ್ಗೆ ಚರ್ಚಿಸುತ್ತಾ ಕಳೆಯುತ್ತಿದ್ದರು. ಛಬಿಲ್ ದಾಸ್ ರವರು ಮದುವೆಯಾಗಲು ಹೊರಟಾಗ ಭಗತ್ ಸಿಂಗ್ ರು ಅವರನ್ನು ಭೇಟಿಯಾಗಿ, ಬದುಕಿನಲ್ಲಿ ಅನೇಕ ಮುಖ್ಯ ಗುರಿಗಳನ್ನು ಸಾಧಿಸಲು ಮದುವೆಯು ಅಡ್ಡಿಯಾಗುತ್ತದೆ ಎಂದು ಅವರನ್ನು ಟೀಕಿಸಿದರು. ಛಬಿಲ್ ದಾಸರು ಸ್ವಂತಿಕೆಯಿಂದ ಯೋಚನೆ ಮಾಡುತ್ತಾ ನನ್ನ ರಾಜಕೀಯ ಮತ್ತು ಸಾಂಸ್ಕೃತಿಕ ಆಸಕ್ತಿಗಳನ್ನು ಹಂಚಿಕೊಳ್ಳುವ ಮಡದಿ ಇದ್ದಲ್ಲಿ ಅದು ಹೆಚ್ಚಿನ

ಸಾಧನೆ ಮಾಡಲು ಸಾಮರ್ಥ್ಯ ನೀಡಬಹುದು ಎಂದು ತಾಳ್ಮೆಯಿಂದ ಉತ್ತರಿಸಿದರು. ಅವರು ಶ್ರೀಮತಿ ಸನ್ ಯಾತ್ ಸೇನ್ ಮತ್ತು ಇತರ ಜಾಗತಿಕ ನಾಯಕರುಗಳ ಮಡದಿಯರ ಉದಾಹರಣೆಯನ್ನು ನೀಡಿದರು. ಭಗತ್ ಸಿಂಗ್ ರವರು ಕೆಲಕಾಲ ಸುಮ್ಮನಿದ್ದು ನಂತರ, "ಗುರೂಜಿ ನಿಮ್ಮನ್ನು ಯಾರಾದರೂ ವಾದದಲ್ಲಿ ಸೋಲಿಸ ಬಹುದೇ" ಎಂದರು. ಕಲಿಕೆ ಮತ್ತು ಚರ್ಚೆಯನ್ನು ಉತ್ತೇಜಿಸುವ ಅಂತಹ ಶೈಕ್ಷಣಿಕ ವಾತಾವರಣವು ಭಗತ್ ಸಿಂಗ್ ರಂತಹ ಧೀಶಕ್ತಿಯ ವ್ಯಕ್ತಿತ್ವವನ್ನು ಸೃಷ್ಟಿಸಿತು. ಒಬ್ಬ 15-16 ವರ್ಷ ವಯಸ್ಸಿನ ಹುಡುಗನು ತನ್ನ ಪ್ರಾಂಶುಪಾಲರ ಬಳಿ ಹೋಗಿ ಅವರು ಮದುವೆಯಾಗಬಾರದೆಂದು ಒಪ್ಪಿಸಲು ಪ್ರಯತ್ನ ನಡೆಸುವುದು ಸಾಧ್ಯವಾದದ್ದು ಹೀಗೆ. ಪ್ರಾಂಶುಪಾಲರು ಪ್ರಾಮಾಣಿಕತೆಯಿಂದ, ತರ್ಕಬದ್ಧವಾಗಿ ಪ್ರತಿಕ್ರಿಯಿಸಲು ಕೂಡ ಸಾಧ್ಯವಾದದ್ದು ಈ ವಾತಾವರಣದಿಂದಲೇ. ಇಲ್ಲಿ ನಿರ್ಮಿಸಲಾಗುತ್ತಿದ್ದ ರಾಷ್ಟ್ರ ಸಂಸ್ಕೃತಿಯು ಪ್ರಶ್ನಿಸುವ ಧೈರ್ಯವನ್ನು ತುಂಬುವ, ವೈಚಾರಿಕತೆಯನ್ನು ಬೆಳೆಸುವ ಸಂಸ್ಕೃತಿಯಾಗಿತ್ತು. ಅದು ಕುರುಡು ವಿಧೇಯತೆಯನ್ನು ಹುಟ್ಟಿಸುವ ಸಂಸ್ಕೃತಿಯಾಗಿರಲಿಲ್ಲ.

ಭಗತ್ ಸಿಂಗ್ ಒಬ್ಬ ಅಪಾರ ಹಸಿವಿನ ಓದುಗನಾಗಿದ್ದ ಎಂಬುದನ್ನು ನಾವು ಪದೇ ಪದೇ ಕೇಳಿರುತ್ತೇವೆ. ಅವರನ್ನು ಭೇಟಿಯಾದಾಗಲೆಲ್ಲಾ ಅವರ ಜುಬ್ಬಾದ ಜೇಬುಗಳ ತುಂಬಾ ಪುಸ್ತಕಗಳಿರುತ್ತಿದ್ದವು ಎಂದು ಜನರು ಹೇಳುತ್ತಾರೆ. ತಾನು ಸಾಯುವ ಮುನ್ನ ಬಂಧಿಯಾಗಿದ್ದ ಜೈಲಿನ ಕೊಠಡಿಯಿಂದ ತನ್ನ ಸ್ನೇಹಿತನಿಗೆ ಬರೆದ ಕೊನೆಯ ಪತ್ರವೊಂದರಲ್ಲಿ ಅವರು, ಸಾರ್ವಜನಿಕ ಗ್ರಂಥಾಲಯಕ್ಕೆ ಹೋಗಿ ಐದು ಪುಸ್ತಕಗಳನ್ನು ಎರವಲು ತೆಗೆದುಕೊಂಡು ತನ್ನನ್ನು ಭೇಟಿಯಾಗಲು ಬರುವವರೊಂದಿಗೆ ಕಳಿಸಿಕೊಡಬೇಕೆಂದು ಕೇಳಿಕೊಂಡಿದ್ದರು. ಲಾಲಾ ರಾಮ್ ಸರಣ್ ದಾಸ್ ರವರ 'ಡ್ರೀಮ್ ಲ್ಯಾಂಡ್' ಪುಸ್ತಕಕ್ಕೆ ಅವರು ತನ್ನನ್ನು ಗಲ್ಲಿಗೇರಿಸುವುದಕ್ಕೆ ಎರಡು ತಿಂಗಳು ಮುಂಚೆ ಬರೆದ ಮುನ್ನುಡಿಯಲ್ಲಿ ಅವರ ಚಿಂತನಾಮಟ್ಟ ವ್ಯಕ್ತವಾಗುತ್ತದೆ. ನಾನು ಅಂಥದೊಂದು ಮುನ್ನುಡಿಯನ್ನು ಓದಿಯೇ ಇಲ್ಲ. ಅವರು ಪುಸ್ತಕದಲ್ಲಿ ಅಡಕವಾಗಿದ್ದ ಅಂಶಗಳನ್ನು ಪ್ರಶ್ನಿಸುತ್ತಾ ಹೋಗುತ್ತಾರೆ ಮತ್ತು ಕೆಲವೊಂದು ವಿಷಯಗಳಿಗೆ ಸಂಬಂಧಿಸಿದಂತೆ, ಆ ಸಾಲುಗಳನ್ನು ಬರೆಯುವಾಗ ಲೇಖಕರ ಮನದಲ್ಲಿದ್ದ ನಿಲುವು ಇಂತಹ ರೀತಿಯಲ್ಲಿ ಇದ್ದರೆ ತಾನು ಅವರೊಂದಿಗೆ ಸಮ್ಮತಿ ಸೂಚಿಸಬಲ್ಲೆ ಎಂದೂ, ಇಲ್ಲದಿದ್ದರೆ ತಮ್ಮಿಬ್ಬರ ನಿಲುವುಗಳೂ ಬೇರೆ ಬೇರೆ ಎಂದೂ ಸ್ಪಷ್ಟಪಡಿಸುತ್ತಾರೆ. ಮುನ್ನುಡಿಯ ಕೊನೆಯ ಭಾಗದಲ್ಲಿ ಅವರು ಹೇಳುತ್ತಾರೆ:

"ನಾನು ಈ ಪುಸ್ತಕವನ್ನು ವಿಶೇಷವಾಗಿ ನವ ತರುಣರಿಗೆಂದು ಶಿಫಾರಸು ಮಾಡುತ್ತೇನೆ, ಆದರೆ ಒಂದು ಎಚ್ಚರಿಕೆಯೊಂದಿಗೆ. ಕುರುಡಾಗಿ ಅನುಸರಿಸುವುದಕ್ಕಾಗಿ ಇದನ್ನು ಓದಬೇಡಿ ಮತ್ತು ಇದರಲ್ಲಿರುವುದನ್ನೆಲ್ಲಾ ಸ್ವಯಂಸಿದ್ಧ ಸತ್ಯ ಎಂದು ಭಾವಿಸಬೇಡಿ. ಇದನ್ನು ಓದಿ, ವಿಮರ್ಶಿಸಿ, ಅದರ ಬಗ್ಗೆ ಚಿಂತಿಸಿ ಮತ್ತು ಅದರ ನೆರವಿನೊಂದಿಗೆ ನಿಮ್ಮದೇ ವಿಚಾರಗಳನ್ನು ರೂಪಿಸಿಕೊಳ್ಳಿ."

ತನ್ನ ಕುಟುಂಬದವರೊಂದಿಗೆ ಸಂಪರ್ಕವನ್ನು ಕಡಿದುಕೊಂಡು ಭಗತ್ ಸಿಂಗ್ 1923 ರಲ್ಲಿ ಲಾಹೋರ್ ನಗರವನ್ನು ತೊರೆದು ಹೋದದ್ದು ಭಾಗಶಃವಾದರೂ ತಾನು ಮದುವೆಯಾಗಬೇಕೆಂದು ಒತ್ತಡ ಹೇರುತ್ತಿದ್ದ ತನ್ನವರ ಒತ್ತಡದಿಂದ ತಪ್ಪಿಸಿಕೊಳ್ಳುವ ಕಾರಣಕ್ಕೆ ಎಂದು ಅವರ ಸಹಪಾಠಿಯಾಗಿದ್ದ ಜೈದೇವ್ ಗುಪ್ತಾ ಹೇಳಿದ್ದಾರೆ. ತನ್ನ ಬದುಕು ಹೋರಾಟಕ್ಕೆ ಸಮರ್ಪಿತವಾದಂಥದ್ದು ಎಂದು ಸಹ ಆತ ತನ್ನ ಮನಸ್ಸಿನಲ್ಲಿ ಅಷ್ಟು ಹೊತ್ತಿಗಾಗಲೇ ನಿರ್ಧರಿಸಿಬಿಟ್ಟಿದ್ದರು ಎಂದು ಕಾಣುತ್ತದೆ. ಆ ಸಮಯದಲ್ಲಿ ಒಂದು ಪ್ರಮುಖ ಕ್ರಾಂತಿಕಾರಿ ಚಟುವಟಿಕೆಗಳ ಕೇಂದ್ರವಾಗಿದ್ದ ಕಾನ್ ಪುರಕ್ಕೆ ಆತ ತೆರಳಿದರು ಮತ್ತು ಕಾಂಗ್ರೆಸ್ ಅನ್ನು ಬೆಂಬಲಿಸುತ್ತಿದ್ದ ಪತ್ರಕರ್ತ ಗಣೇಶ್ ಶಂಕರ ವಿದ್ಯಾರ್ಥಿಯವರ ಸುತ್ತಲೂ ಇದ್ದ ಗುಂಪಿನ ಭಾಗವಾದರು. ಅವರನ್ನು ಭೇಟಿಯಾದಾಗ ಗಣೇಶ್ ಶಂಕರ ವಿದ್ಯಾರ್ಥಿಯವರು ಭಗತ್ ರನ್ನು ನೀವು ಎಲ್ಲಾ ರೀತಿಯ ಕಷ್ಟಕೋಟಲೆಗಳನ್ನು ಸಹಿಸಲು ಮತ್ತು ದೇಶಸೇವೆಗಾಗಿ ಜೀವನವನ್ನೇ ತ್ಯಾಗಮಾಡಲು ಸಿದ್ಧರಿದ್ದೀರಾ ಎಂದು ಕೇಳಿದರು. ವಿದ್ಯಾರ್ಥಿಯವರು 1931 ರಲ್ಲಿ ಕಾನ್ ಪುರದಲ್ಲಿ ದಂಗೆಗಳು ಆರಂಭವಾದಾಗ ಮುಗ್ಧ ಹಿಂದೂ-ಮುಸ್ಲಿಮರನ್ನು ರಕ್ಷಿಸುವ ಕಾರ್ಯದಲ್ಲಿ ಧುಮುಕಿ ಸ್ವತಃ ತಾವೇ ಆ ತ್ಯಾಗವನ್ನು ಮಾಡಿಬಿಟ್ಟರು. ಜನರ ಮಂದೆಯ ದಾಳಿಗಳಿಂದ ಜೀವತ್ಯಾಗ ಮಾಡುವ ಮುನ್ನ ವಿದ್ಯಾರ್ಥಿಯವರು ಹಿಂದೂಗಳು, ಮುಸಲ್ಮಾನರನ್ನು ಎಲ್ಲರನ್ನೂ ಸಾವಿರಾರು ಸಂಖ್ಯೆಯಲ್ಲಿ ಬದುಕಿಸಿದ್ದರು ಎಂದು ಹೇಳಲಾಗಿದೆ. ಅಂತಹ ಮನುಷ್ಯನಿಗೆ ಭಗತ್ "ಹೌದು" ಎಂದು ಉತ್ತರಿಸಿದರು, ಅವರು ಸಿದ್ಧರಾಗಿದ್ದರು. ಆಗ ಅವರಿಗೆ 17 ವರ್ಷ ವಯಸ್ಸು.

ಅವರು ಗಣೇಶ್ ಶಂಕರ ವಿದ್ಯಾರ್ಥಿಯವರ 'ಪ್ರತಾಪ್' ಮುದ್ರಣದಲ್ಲಿ ಕೆಲಸ ಮಾಡಲಾರಂಭಿಸಿ ಚಂದ್ರಶೇಖರ ಆಜಾದ್, ಬಟುಕೇಶ್ವರ ದತ್ತ ಮುಂತಾದ ಚೈತನ್ಯೋತ್ಸಾಹವುಳ್ಳ ತರುಣರ ಗುಂಪಿನ ಭಾಗವಾದರು. ಆ ನಂತರ ಅವರನ್ನು ಅಲಿಗಢದ ಬಳಿಯಲ್ಲಿ ಸ್ಥಾಪಿಸಲಾಗಿದ್ದ ನ್ಯಾಷನಲ್ ಸ್ಕೂಲ್ ಒಂದಕ್ಕೆ ಮುಖ್ಯೋಪಾಧ್ಯಾಯರನ್ನಾಗಿ ಮಾಡಲಾಯಿತು. ಏತನ್ಮಧ್ಯೆ ಅವರ ಕುಟುಂಬದವರು ಅವರಿಗಾಗಿ ಹುಡುಕಾಟ ನಡೆಸಿದ್ದರು ಮತ್ತು ಕವಿ ಹಸರತ್

ಮೊಹಾನಿಯವರ ("ಚುಪ್ಕೆ ಚುಪ್ಕೆ ರಾತ್ ದಿನ್ ಆಂಸೂ ಬಹಾನಾ ಯಾದ್ ಹೈ" ಹಾಡನ್ನು ಬರೆದವರು) ಮೂಲಕ, ಅವರ ರೋಗಗ್ರಸ್ತ ಅಜ್ಜಿಗಾಗಿ ವಾಪಸಾಗಬೇಕೆಂದು ಹೇಳಿಸಿದರು. ಹಿಂದಿರುಗಲು ಒಪ್ಪಿಕೊಂಡ ಭಗತ್‌ಸಿಂಗ್ ಆನಂತರ ಲಾಹೋರ್ ಮತ್ತಿತರ ಕಡೆಗಳಲ್ಲಿನ ತಮ್ಮಂತೆಯೇ ಯೋಚಿಸುತ್ತಿದ್ದವರು ನಡೆಸುತ್ತಿದ್ದ ವಿವಿಧ ಪತ್ರಿಕೆಗಳಿಗೆ ಬರೆಯಲಾರಂಭಿಸಿದರು. ಅವರು ಸಮೃದ್ಧವಾಗಿ ಬರೆಯುತ್ತಾ ಹೋದರು ಮತ್ತು ಪ್ರೊಫೆಸರ್ ಚಮನ್ ಲಾಲ್ ಹಾಗೂ ಪ್ರೊಫೆಸರ್ ಇರ್ಫಾನ್ ಹಬೀಬ್ ಅವರುಗಳು ಈಗಲೂ ಸಹ ಆತ ಬರೆದ ಪತ್ರಗಳು ಮತ್ತು ದಾಖಲೆಗಳನ್ನು ಹೊಸದಾಗಿ ಹುಡುಕಿ ವರದಿ ಮಾಡುತ್ತಲೇ ಇದ್ದಾರೆ.

ಕಾನ್ ಪುರ್ ದ ನಂತರದ ದಿನಗಳಲ್ಲಿ ಅವರು ಪೋಲೀಸರು ತಮ್ಮನ್ನು ಗುರುತಿಸಲಾಗದೇ ಇರಲಿ ಎಂದು ಬಲವಂತ್ ಸಿಂಗ್ ಎಂಬ ಹೆಸರನ್ನು ಉಪಯೋಗಿಸಲಾರಂಭಿಸಿದರು. ಕಾನ್ ಪುರದಲ್ಲಿಯೇ ಅವರು ಹಿಂದೂಸ್ತಾನ್ ರಿಪಬ್ಲಿಕನ್ ಅಸೋಸಿಯೇಶನ್ ನ ಸದಸ್ಯರಾದದ್ದು. 1926 ರಲ್ಲಿ ಅವರು ಲಾಹೋರ್ ಗೆ ಹಿಂದಿರುಗಿದರು ಮತ್ತು ಕಾನ್ ಪುರದಲ್ಲಿ ದೊರೆತಿದ್ದ ಅನುಭವದೊಂದಿಗೆ ಅವರು ನೌಜವಾನ್ ಭಾರತ್ ಸಭಾ ಅನ್ನು ಸ್ಥಾಪಿಸಿದರು.

ತರುಣ ಭಗತ್ ಸಿಂಗ್ ರ ಬೆಳವಣಿಗೆಯಲ್ಲಿ ನಾವು ಕಾಣುವುದೇನೆಂದರೆ, ಮನುಷ್ಯರು ತಾವಾಗಿಯೇ ಒಂದು ಧ್ಯೇಯಕ್ಕೆ ಸಂಪೂರ್ಣವಾಗಿ ಸಮರ್ಪಿತವಾಗುವುದಿಲ್ಲ. ಸಹಸ್ರಾರು ಜನ ಕಾಣಿಕೆ ನೀಡಿದ ಸಂಸ್ಥೆಗಳು ಮತ್ತು ಸಂಸ್ಕೃತಿಗಳ ಅಸ್ತಿತ್ವದ ಮೂಲಕ ಅವರಲ್ಲಿ ಬದಲಾವಣೆಯು ಘಟಿಸುತ್ತದೆ. ನಾವೇ ಸ್ವತಃ ಭಗತ್ ಸಿಂಗ್ ರಾಗದಿರಬಹುದು. ಆದರೆ ನಾವು ಪ್ರಾಮಾಣಿಕತೆ, ಧೈರ್ಯ ಮತ್ತು ನಿಷ್ಠೆಯ ಬದುಕನ್ನು ನಡೆಸಿದಾಗ ಭಗತ್ ಸಿಂಗ್ ರನ್ನು ಉತ್ಪಾದಿಸುವಂಥ ಸಂಸ್ಕೃತಿಗೆ ಕೊಡುಗೆ ನೀಡಿರುತ್ತೇವೆ.

## ಭಗತ್ ಸಿಂಗ್ ರ ರಾಜಕೀಯ ಆದರ್ಶಗಳು

ಭಗತ್ ಸಿಂಗ್ ರಿಗೆ 21-22 ವಯಸ್ಸಾಗುವ ವೇಳೆಗೆ ಅವರ ರಾಜಕೀಯ ವಿಚಾರಗಳು ಸಾಮಾಜಿಕ ಸಮಾನತೆ ಮತ್ತು ಸಮಾನತಾವಾದಿ ಸಮಾಜವನ್ನು ಸೃಷ್ಟಿಸುವ ಕನಸನ್ನೇ ಹೊತ್ತುಕೊಂಡಿದ್ದವು. ಬಡವರು ಮತ್ತು ಶ್ರೀಮಂತರು ಇಲ್ಲದಿರುವಂತಹ ಸಮಾಜವನ್ನು ಸೃಷ್ಟಿಸುವ ಕುರಿತು ಅವರು ಮಾತನಾಡುತ್ತಿದ್ದರು ಮತ್ತು ಬರೆಯುತ್ತಿದ್ದರು. ಸಮಾಜದಲ್ಲಿನ ಕ್ರಾಂತಿಕಾರಿ

ಶಕ್ತಿಗಳು ಇರುವುದು ರೈತರು ಮತ್ತು ಕಾರ್ಮಿಕರಲ್ಲಿ ಎಂದು ಅವರು ನಂಬಿದ್ದರು. ಅವರ ಬೆಂಬಲವನ್ನು ಗೆದ್ದುಕೊಳ್ಳುವುದರಿಂದ ಈ ಸಮಾಜವನ್ನು ಬದಲಾಯಿಸಬಹುದು. ಇದನ್ನು ಸಾಧಿಸುವುದು ಸುಲಭವಲ್ಲ ಎಂಬುದು ಅವರಿಗೆ ಗೊತ್ತು. ಈಗ ಅವರು "ಅಹಿಂಸೆ ಎಂಬ ಯುಟೋಪಿಯಾ"ವನ್ನು ಕುರಿತು ಮಾತನಾಡಲಾರಂಭಿಸಿದ್ದರು. ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಅಹಿಂಸೆಯೇ ಉತ್ತಮ ಮಾರ್ಗ ಎಂದು ಅವರು ಒಪ್ಪುತ್ತಾರೆ. ಆದರೆ ನೀವು ಆಳವಾಗಿ ಬೇರೂರಿರುವ ಶೋಷಕ ವ್ಯವಸ್ಥೆಗಳನ್ನು ಕಿತ್ತೊಗೆಯಬೇಕೆಂದರೆ ಹಿಂಸೆಯನ್ನು ಉಪಯೋಗಿಸುವುದು ಅನಿವಾರ್ಯ ಎಂದು ಅವರು ನಂಬಿದ್ದರು.

## ಹಿಂಸೆ ಮತ್ತು ತ್ಯಾಗದ ಸಂಸ್ಕೃತಿ

ಇದು ಸಾವಿನತ್ತ ನಡೆಸುತ್ತದೆ ಎಂದು ಚೆನ್ನಾಗಿಯೇ ಗೊತ್ತಿರುವ ಹಾದಿಯೊಂದಕ್ಕೆ ತರುಣನೊಬ್ಬನು ಹೇಗೆ ಬದ್ಧನಾಗಲು ಸಾಧ್ಯ ಎಂಬುದನ್ನು ಇಂದಿನ ದಿನಗಳಲ್ಲಿ ಗ್ರಹಿಸುವುದು ಬಹಳ ಕಷ್ಟ. ಭಗತ್ ಸಿಂಗ್ ಬಂಧಿತರಾದದ್ದು ಒಂದು ಆಕಸ್ಮಿಕವಲ್ಲ. ಹೇಗೆ ನ್ಯಾಯಾಲಯದ ಆವರಣವನ್ನು ತನ್ನ ಧ್ಯೇಯದ ಗರಿಷ್ಠಮಟ್ಟದ ಪ್ರಚಾರಕ್ಕೆ ಉಪಯೋಗಿಸಿಕೊಳ್ಳಬೇಕೆಂಬುದು ಆತನ ಧ್ಯೇಯವಾಗಿತ್ತೋ ಅದೇ ರೀತಿಯಲ್ಲಿ ಬಂಧನಕ್ಕೊಳಗಾದದ್ದು ಸಹ ಆತನ ಯೋಜನೆಯ ಭಾಗವೇ. ನಂತರದ ಕಾಲದಲ್ಲಿ ತಾನು ಬದುಕಿರುವುದರಿಂದ ಸಾಧಿಸುವುದಕ್ಕಿಂತ ಹೆಚ್ಚಿನದನ್ನು ಸಾವಿನ ಮೂಲಕ ಸಾಧಿಸಲಿದ್ದೇನೆ ಎಂದು ಆತ ತನ್ನ ಗೆಳೆಯರಿಗೆ ಹೇಳಿದ್ದ. ಇಂದಿನ ದಿನಗಳಲ್ಲಿ ಒಬ್ಬ ಯುವಕನ ಬದುಕು ಕೊಳ್ಳುಬಾಕತನ, ದೊಡ್ಡ ಸಂಬಳ, ಮೊಬೈಲ್ ಫೋನ್ ಗಳು, ಹೆಚ್ಚು ಹೆಚ್ಚು ರೋಚಕ ವಸ್ತುಗಳನ್ನು ಉಪಯೋಗಿಸುವುದು ಇವುಗಳ ಸುತ್ತಲೂ ಇರುವಾಗ, ಅಂತಹ ಜೀವನ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳಲು ನಾವು ಹೆಣಗಾಡುತ್ತೇವೆ.

ತ್ಯಾಗ ಮತ್ತು ಶಿಸ್ತಿನ ಸಂಸ್ಕೃತಿಯು ಬಹಳಷ್ಟು ಮಟ್ಟಿಗೆ ಅವರ ಕುಟುಂಬದಲ್ಲಿ ಮತ್ತು ಪಂಜಾಬಿ ಕ್ವೌಮಿ ವಿದ್ಯಾಪೀಠದಲ್ಲಿ ದೊರಕಿದ್ದ ಶಿಕ್ಷಣದಲ್ಲಿ ಇದ್ದಿತು. ತನ್ನ ಬದುಕಿನ ಪಥದ ಗತಿಯಲ್ಲಿ ಭಗತ್ ರು ತಾವು ಕಾನ್ ಪುರದಲ್ಲಿದ್ದಾಗ, ರಾಜಕೀಯ ರಣತಂತ್ರವಾಗಿ ಹಿಂಸೆಯನ್ನು ಬಹಿರಂಗವಾಗಿ ಉತ್ತೇಜಿಸುತ್ತಿದ್ದ ಸಂಸ್ಕೃತಿಯೊಳಗೆ ಧುಮುಕಿದ್ದರು. ಹಿಂದೂಸ್ತಾನ್ ರಿಪಬ್ಲಿಕನ್ ಅಸೋಸಿಯೇಷನ್ ಮತ್ತು ಅದರ ನಾಯಕರಾದ ಸಚಿನ್ ಸನ್ಯಾಲ್ ರವರು ಒಂದು ಭೂಗತ ದಳವನ್ನು

ಹೊಂದಿದ್ದರು ಮತ್ತು ಅದು ಹಿಂಸಾತ್ಮಕ ಕ್ರಾಂತಿಯ ಪಂಥವನ್ನು ಸಕ್ರಿಯವಾಗಿ ಬೆಳೆಸುತ್ತಿತ್ತು. ದಮನಕಾರಿಯಾದಂಥ ಎಲ್ಲಾ ವ್ಯವಸ್ಥೆಗಳನ್ನೂ ಪುಡಿ ಪುಡಿ ಮಾಡಲು ಹಿಂಸೆಯೊಂದೇ ದಾರಿ ಎನ್ನುವ ಅರಾಜಕತಾವಾದಿ ಉಗ್ರವಾದವನ್ನು ಬೆಂಬಲಿಸುವ ಕರಪತ್ರವೊಂದನ್ನು ಹಿಂದುಸ್ತಾನ್ ರಿಪಬ್ಲಿಕನ್ ಅಸೋಸಿಯೇಷನ್ ನ ಪರವಾಗಿ 1925 ರಲ್ಲಿ ಬರೆದವರು ಸಚಿನ್ ಸನ್ಯಾಲ್ ರವರೇ ಎನಿಸುತ್ತದೆ. ಅರಾಜಕತಾವಾದಿ ಉಗ್ರವಾದ (anarcho-terrorism) ಎಂಬ ರಾಜಕೀಯ ವೈಚಾರಿಕತೆಯು 19ನೆಯ ಶತಮಾನದ ಅಂತ್ಯದಲ್ಲಿ ಯುರೋಪ್ ಮತ್ತು ಅಮೆರಿಕಾದಲ್ಲಿ ಜನಪ್ರಿಯತೆಯನ್ನು ಗಳಿಸಿಕೊಂಡಿತ್ತು. ಅದರಲ್ಲಿದ್ದ ಮೂಲಭೂತ ಕಲ್ಪನೆಯೆಂದರೆ ಜನಸಮುದಾಯದ ಜಡತ್ವವನ್ನು ಮುರಿಯಲು ನಾಟಕೀಯ ಶೈಲಿಯ ಹಿಂಸಾತ್ಮಕ ಕ್ರಿಯೆ ಅಗತ್ಯ ಎಂಬುದು. ಇದು ದಮನ ಮಾಡುವ ಶಕ್ತಿಗಳಲ್ಲಿ ಭೀತಿ ಹುಟ್ಟಿಸುತ್ತದೆ ಮತ್ತು ಜನರನ್ನು ಒಂದುಗೂಡಿಸುತ್ತದೆ ಎಂದು ಅವರು ನಂಬಿದ್ದರು. ಹಿಂದೂಸ್ತಾನ್ ರಿಪಬ್ಲಿಕನ್ ಅಸೋಸಿಯೇಷನ್ ಸಂಘಟನೆಯು ಅರಾಜಕತಾವಾದಿ ಉಗ್ರವಾದ ಸಿದ್ಧಾಂತವನ್ನು ಕ್ರಿಯಾಶೀಲವಾಗಿ ಅಳವಡಿಸಿಕೊಂಡಿತ್ತು ಮತ್ತು ಅದೇ ಸಿದ್ಧಾಂತವೇ ಸಾಂಡರ್ಸ್ ಕೊಲೆಯನ್ನು ಮತ್ತು ಭಗತ್ ಸಿಂಗ್ ರ ಬಂಧನದ ಮತ್ತು ಗಲ್ಲು ಶಿಕ್ಷೆಗೆ ಕಾರಣವಾದ ರಾಷ್ಟ್ರೀಯ ಶಾಸನ ಸಭೆಯ ಬಾಂಬ್ ಸ್ಫೋಟದ ಘಟನೆಗಳಿಗೆ ಮಾರ್ಗದರ್ಶನ ನೀಡಿತ್ತು ಎನಿಸುತ್ತದೆ.

ತಮ್ಮ ಬದುಕಿನ ಅವಧಿಯಲ್ಲಿ ಅವರು ರಾಜಕೀಯ ಮತ್ತು ಹಿಂಸೆಯನ್ನು ಯಾವ ರೀತಿ ನೋಡುತ್ತಾ ಹೋದರು ಎಂಬುದನ್ನು ನಾವು ಗಮನಿಸಬಹುದು. ಅವರ ಬರವಣಿಗೆಯ ಆರಂಭಿಕ ವರ್ಷಗಳಲ್ಲಿ ಧೈರ್ಯ ಮತ್ತು ತ್ಯಾಗದ ಭಾವೋದ್ವೇಗ ಮತ್ತು ಕಾವ್ಯಮಯತೆ ಇದೆ. ಆದರೆ ಭವಿಷ್ಯದ ಕುರಿತಾದ ವಿಶಾಲ ರಣತಂತ್ರ ಅಥವಾ ಯೋಜನೆ ಹೆಚ್ಚಾಗಿ ಕಾಣುವುದಿಲ್ಲ. ಬಬ್ಬರ್ ಅಕಾಲಿಗಳನ್ನು ಹೊಗಳುತ್ತಾ ತನ್ನ ಹತ್ತೊಂಬತ್ತನೆಯ ವಯಸ್ಸಿನಲ್ಲಿ 'ಪ್ರತಾಪ್' ಪತ್ರಿಕೆಗೆ ಬರೆದ ಲೇಖನದ ಆಯ್ದ ಭಾಗವನ್ನು ಇಲ್ಲಿ ಉದ್ಧರಿಸಲಾಗಿದೆ. ಆತ ತನ್ನ ಮನಸ್ಸಿನಲ್ಲಿ ಉಗ್ರವಾದಿಗಳನ್ನು ಪೊಲೀಸರು ಸುತ್ತುವರೆದಿರುವ ದೃಶ್ಯವನ್ನು ಕಲ್ಪಿಸಿಕೊಂಡು ಅದನ್ನು ವರ್ಣಿಸುತ್ತಿದ್ದಾರೆ:

"ನಾವು ನಮ್ಮ ಸರ್ವಸ್ವವನ್ನೂ ದೇಶಕ್ಕಾಗಿ ತ್ಯಾಗ ಮಾಡುತ್ತೇವೆ. ನಾವು ಹೋರಾಡುತ್ತಾ ಸಾಯುತ್ತೇವೆಯೇ ಹೊರತು ಬಂಧನಕ್ಕೆ ಒಳಗಾಗುವುದಿಲ್ಲ ಎಂದು ಆಣೆ ಮಾಡುತ್ತೇವೆ.

ತಮ್ಮ ಕೌಟುಂಬಿಕ ಪ್ರೇಮವನ್ನೆಲ್ಲಾ ತ್ಯಾಗ ಮಾಡಿದ ಆ ಜನ ಅಂತಹ ಪ್ರತಿಜ್ಞೆಯನ್ನು ಮಾಡಿದಾಗ ಅದೆಂಥ ಸುಂದರ ಪವಿತ್ರ ದೃಶ್ಯವಾಗಿರಬೇಕು? ಧೈರ್ಯ ಮತ್ತು ನಿರ್ಭೀತ ಮನೋಭಾವಕ್ಕೆ ಮಿತಿಗಳು ಎಲ್ಲಿವೆ? ಆದರ್ಶದ ಉತ್ತುಂಗವು ಎಲ್ಲಿ ನೆಲೆಗೊಂಡಿರುತ್ತದೆ."

ಆತನ ನಂತರದ ಬರಹಗಳಲ್ಲಿ ನಾವು ಹೆಚ್ಚಿನ ಪ್ರಬುದ್ಧ ಧೋರಣೆಯನ್ನು ಕಾಣತೊಡಗುತ್ತೇವೆ. ಜೈಲಿನಿಂದ ಬರೆದ ತನ್ನ ಲೇಖನಗಳಲ್ಲಿ ಆತ ತನಗೆ ಹಿಂಸೆಯ ಪಂಥದಲ್ಲಿ, ಪಿಸ್ತೂಲ್ ಮತ್ತು ಬಾಂಬ್ ಗಳಷ್ಟರಲ್ಲೇ ನಂಬಿಕೆ ಇಲ್ಲವೆಂದು ಒತ್ತಿ ಹೇಳಲಾರಂಭಿಸುತ್ತಾರೆ. ಬದಲಿಗೆ ಈಗ ಆತ ಮೂರ್ತವಾದ ಶೋಷಣೆಯ ಬಗ್ಗೆ ಮತ್ತು ದಮನವನ್ನು ಕೊನೆಗಾಣಿಸುವ ಆಶೆಯ ಬಗ್ಗೆ ಮಾತನಾಡುತ್ತಿದ್ದಾರೆ.

ಆತ ಎಳೆಯ ರಾಜಕೀಯ ಕಾರ್ಯಕರ್ತರಿಗಾಗಿ ಸಂದೇಶವನ್ನು ಬರೆದು ಅದರಲ್ಲಿ ಇದು ಬಂದೂಕುಗಳನ್ನು ಕೈಗೆತ್ತಿಕೊಳ್ಳಲು ಸೂಕ್ತ ಕಾಲವಲ್ಲ ಎನ್ನುತ್ತಾರೆ. ಬದಲಿಗೆ ಅವರು ಯುವಜನ ಚಳವಳಿಯನ್ನು ಕಟ್ಟಬೇಕು ಮತ್ತು ನಂತರ ಅದರ ಮೂಲಕ ಕ್ರಾಂತಿಕಾರಿ ಪಕ್ಷವನ್ನು ರಚಿಸಬೇಕು ಎನ್ನುತ್ತಾರೆ. ರಾಜಿ-ಸಂಧಾನಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಅವು ತಿರಸ್ಕಾರಾರ್ಹ ಸಂಗತಿಗಳೇನಲ್ಲ ಎನ್ನುತ್ತಾರೆ. ಬದಲಿಗೆ ಜಗತ್ತಿನ ಎಲ್ಲೆಡೆಯ ಕ್ರಾಂತಿಕಾರಿ ಚಳವಳಿಗಳ ಉದಾಹರಣೆಯನ್ನು ನೀಡುತ್ತಾ ಅವರು ಸಂಧಾನಗಳ ಮೂಲಕವೇ ಕ್ರಮೇಣ ಆಂದೋಲನಗಳು ಶಕ್ತಿಯನ್ನು ಗಳಿಸಿಕೊಳ್ಳಲಾರಂಭಿಸುತ್ತವೆ ಎನ್ನುತ್ತಾರೆ. ಅವರು ಹದಿನಾರಾಣೆಗೆ ಆಗ್ರಹಿಸಿ (ಆಗ ಹದಿನಾರು ಆಣೆ ಎಂದರೆ ಒಂದು ರೂಪಾಯಿ) ನಂತರ ಒಂದಾಣೆಯನ್ನು ಪಡೆದುಕೊಳ್ಳುವ ರೂಪಕವನ್ನು ಬಳಸಿಕೊಳ್ಳುತ್ತಾರೆ. ಆ ಒಂದಾಣೆಯನ್ನು ಮೊದಲು ಜೇಬಿಗೆ ಹಾಕಿಕೊಂಡು ನಂತರ ಹೆಚ್ಚಿನದನ್ನು ಕೇಳಲು ಆರಂಭಿಸಬೇಕು ಎಂದು ಅವರು ಹೇಳುತ್ತಾರೆ. ಸೌಮ್ಯವಾದಿಗಳು ಮಾಡುವ ತಪ್ಪೆಂದರೆ ಅವರು ಕೇವಲ ಒಂದಾಣೆಯನ್ನು ಕೇಳುತ್ತಾರೆ ಮತ್ತು ಅವರಿಗೆ ಅದನ್ನು ಸಹ ಗಳಿಸಿಕೊಳ್ಳಲು ಆಗುವುದಿಲ್ಲ.

ಈ ಹೊತ್ತಿಗೆ ಹಿಂಸೆಯ ಉಪಯೋಗದ ಬಗ್ಗೆ ಭಗತ್ ಸಿಂಗ್ ರಿಗೆ ಬೇರೆಯ ದೃಷ್ಟಿಕೋನ ಬಂದಿತ್ತು. ಮಾಡಬೇಕಾದ ಮೊದಲನೆಯ ಕೆಲಸವೆಂದರೆ ರಾಜಕೀಯ ಪಕ್ಷವನ್ನು ರಚಿಸುವುದು ಎಂದು ಅವರು ಹೇಳುತ್ತಾರೆ. ಮಿಲಿಟರಿ ವಿಭಾಗವು ಆನಂತರದ ಆದ್ಯತೆಯದ್ದು.

"ನಾನು ನನ್ನಲ್ಲಿರುವ ಎಲ್ಲಾ ಶಕ್ತಿಯನ್ನು ಉಪಯೋಗಿಸಿ ಹೇಳುವುದೇನೆಂದರೆ ನಾನು ಉಗ್ರವಾದಿಯಲ್ಲ, ನಾನು ಯಾವತ್ತೂ ಆಗಿರಲಿಲ್ಲ; ಪ್ರಾಯಶಃ ನನ್ನ ಕ್ರಾಂತಿಕಾರಿ ಬದುಕಿನ ಆರಂಭಕಾಲ ಮಾತ್ರ ಅದಕ್ಕೆ ಅಪವಾದವಿದ್ದೀತು, ಮತ್ತು ಈಗ ನನಗೆ ಮನದಟ್ಟಾಗಿರುವುದೇನೆಂದರೆ, ಆ ವಿಧಾನಗಳ ಮೂಲಕ ನಾವು ಏನನ್ನೂ ಗಳಿಸಿಕೊಳ್ಳುವುದು ಸಾಧ್ಯವಿಲ್ಲ . . .ನನ್ನನ್ನು ಯಾರಾದರೂ ತಪ್ಪಾಗಿ ಅರ್ಥೈಸಿಕೊಂಡಿದ್ದರೆ ಅವರು ತಮ್ಮ ಕಲ್ಪನೆಗಳನ್ನು

ಬದಲಾಯಿಸಿಕೊಳ್ಳಲಿ. ಬಾಂಬ್ ಮತ್ತು ಪಿಸ್ತೂಲುಗಳು ನಿರುಪಯೋಗಿ ಎನ್ನಲಾರೆ, ಬದಲಿಗೆ ಅದಕ್ಕೆ ವ್ಯತಿರಿಕ್ತವಾದದ್ದು ನನ್ನ ಅಭಿಪ್ರಾಯ. ಆದರೆ ನನ್ನ ನಿಲುವೇನೆಂದರೆ ಕೇವಲ ಬಾಂಬ್ ಎಸೆಯುವುದು ನಿರುಪಯುಕ್ತ ಕೆಲಸ ಮಾತ್ರವಲ್ಲ, ಕೆಲವೊಮ್ಮೆ ಅದು ಹಾನಿಕಾರಕ. ಪಕ್ಷದ ಮಿಲಿಟರಿ ವಿಭಾಗವು ಯಾವುದೇ ಆಪತ್ ಕಾಲೀನ ಪರಿಸ್ಥಿತಿಗಾಗಿ ತನ್ನ ಕೈಲಾಗುವ ಎಲ್ಲಾ ಯುದ್ಧ ಸಾಮಾಗ್ರಿಗಳನ್ನು ಯಾವಾಗಲೂ ತಯಾರಾಗಿಟ್ಟುಕೊಂಡಿರಬೇಕು. ಅದು ಪಕ್ಷದ ರಾಜಕೀಯ ಕಾರ್ಯವನ್ನು ಬೆಂಬಲಿಸಬೇಕು. ಅದು ಸ್ವತಂತ್ರವಾಗಿ ಕೆಲಸ ಮಾಡಲಾಗದು ಮತ್ತು ಮಾಡಕೂಡದು."

## ಭಗತ್ ಸಿಂಗ್ ರ ರಾಷ್ಟ್ರೀಯ ಕಲ್ಪನೆ

ಭಗತ್ ಸಿಂಗ್ ರು ಆಚರಣೆಗೆ ತಂದದ್ದು ಎಂತಹ ರಾಷ್ಟ್ರವಾದ? ರಾಷ್ಟ್ರವಾದ ಎಂಬುದು ಸಂಸ್ಕೃತಿ-ಮೌಲ್ಯಗಳ, ಧೋರಣೆಗಳ ಮತ್ತು ನಂಬಿಕೆಗಳ ಒಂದು ಮಿಶ್ರಣ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಒಳ್ಳೆಯದು. ರಾಷ್ಟ್ರವಾದದ ಅನೇಕ ಸಂಸ್ಕೃತಿಗಳಿರಬಹುದು. ಭಗತ್ ಸಿಂಗ್ ರ ರಾಷ್ಟ್ರವಾದವು ಯಾವುದರ ಕುರಿತಾದದ್ದು ಎಂದರೆ, ಅದು ಬಡಬಗ್ಗರ ಕುರಿತಾದ ಆಳವಾದ ಬದ್ಧತೆಯನ್ನು ಹೊಂದಿರುವಂಥದ್ದು. ಭಗತ್ ಸಿಂಗ್ ರ ರಾಷ್ಟ್ರವಾದವು ಅಧ್ಯಯನ ಮತ್ತು ಚಿಂತನೆಯನ್ನು ಕುರಿತಾದಂಥದ್ದು. ರಾಷ್ಟ್ರದ ಸೇವೆ ಮಾಡುವುದು ಎಂದರೆ, ಕೆಲವೇ ಜನರು ಉಳಿದವರನ್ನು ತಮ್ಮ ಅಂಕುಶದಲ್ಲಿಟ್ಟುಕೊಳ್ಳುವ ಸಮಾಜವನ್ನು ಕಿತ್ತೊಗೆಯುವ ಸಂಘಟನೆಗಳನ್ನು ಕಟ್ಟುವುದು.

ಇದನ್ನು ಬೇರೆ ರೀತಿಯ ರಾಷ್ಟ್ರವಾದಗಳೊಂದಿಗೆ ಹೋಲಿಸಿ ನೋಡಿ. ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ ಆದರೆ ಅದಕ್ಕಾಗಿ ನಾನು ಏನನ್ನೂ ಮಾಡಲಾರೆ ಎನ್ನುವಂಥ ರಾಷ್ಟ್ರವಾದವೂ ಇದೆ. ಇನ್ನೊಂದು, ನಾನು ನನ್ನ ವೃತ್ತಿಯ ಸಾಧನೆಗಳಿಗಾಗಿಯೇ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿರುತ್ತೇನೆ. ಆದರೆ ಅದೇ ಸಮಯದಲ್ಲಿ ದೂರ ನಿಂತು ಬೇರೆಯವರ ಚಟುವಟಿಕೆಗಳನ್ನು ಹೊಗಳುತ್ತೇನೆ. ಇದು ಭಗತ್ ಸಿಂಗ್ ರ ರಾಷ್ಟ್ರವಾದವಲ್ಲ. ಆತ ದೇಶದ ಸೇವೆಗೆ ಕೆಲಸ ಮಾಡಲು ತಾನೇ ಸ್ವತಃ ಧುಮುಕುತ್ತಾನೆ. ನಾನು ನನ್ನ ದೇಶವನ್ನು ಆರಾಧಿಸುತ್ತೇನೆ, ಅದು ಹಿಂದೆ ಮಹಾನತೆಯನ್ನು ಹೊಂದಿತ್ತು, ಮತ್ತು ಅದು ಈಗಲೂ ಸಹ ಮಹಾನತೆಯನ್ನು ಹೊಂದಿದೆ. ನನ್ನ ದೇಶದ ವಿರುದ್ಧವಾದ ಯಾವುದೇ ಮಾತನ್ನೂ ನಾನು ಕೇಳಿಸಿಕೊಳ್ಳುವುದಿಲ್ಲ ಎನ್ನುವುದು ಇನ್ನೊಂದು ರೀತಿಯ ರಾಷ್ಟ್ರವಾದ. ಇದೂ ಸಹ ಭಗತ್ ಸಿಂಗ್ ರ ರಾಷ್ಟ್ರವಾದವಲ್ಲ. ದೇಶದ ಸಾಮಾಜಿಕ ಕೆಡಕುಗಳನ್ನು ಟೀಕಿಸಿದವರಲ್ಲಿ ಅವರು ಮೊದಲಿಗರು. ಅವರ ಪ್ರಕಾರ ದೇಶಾಭಿಮಾನ ಎಂದರೆ ಆ ಕೆಡಕುಗಳ ಬಗ್ಗೆ ಕಣ್ಣು ಮುಚ್ಚಿಕೊಳ್ಳುವುದಲ್ಲ, ಬದಲಿಗೆ ಅವುಗಳನ್ನು ಅಳಿಸಿಹಾಕಲು ಯತ್ನಿಸುವುದು. ಇದಕ್ಕಾಗಿ ಆತ

ವಿದೇಶಗಳಿಂದ ಕಲಿಯಲು ಮುಕ್ತ ಮನಸ್ಸಿನವರಾಗಿದ್ದರು. ಮತಧರ್ಮವೇ ದೇಶದ ಅಸ್ಮಿತೆಗೆ ಆಧಾರ ಎನ್ನುವ ಇನ್ನೊಂದು ರೀತಿಯ ರಾಷ್ಟ್ರವಾದವೂ ಇದೆ. ಆತ ಇದನ್ನೂ ತಿರಸ್ಕರಿಸುತ್ತಾರೆ. ಆತನಿಗೆ ಎಲ್ಲ ಮತಧರ್ಮಗಳೂ ಸಹ ರಾಷ್ಟ್ರದ ಭಾಗವೇ. ಅದಕ್ಕೂ ಮಿಗಿಲಾಗಿ ಸ್ವಾತಂತ್ರ್ಯಕ್ಕಾಗಿ ನಡೆಯುವ ದೀರ್ಘಕಾಲದ ಹೋರಾಟವು, ಸಂಪೂರ್ಣವಾಗಿ ಮತಧರ್ಮದ ಮೇಲಿನ ಭಾವನಾತ್ಮಕ ಅವಲಂಬನೆಯಿಂದ ತಪ್ಪಿಸಿಕೊಳ್ಳುವುದೇ ಆಗಿದೆ. ಎಲ್ಲಿ ಬಡವರು ಮತ್ತು ಶ್ರೀಮಂತರು ಇರುವುದಿಲ್ಲವೋ, ಎಲ್ಲಿ ಜನತೆ ಧೈರ್ಯವಾಗಿ ಸ್ಪಷ್ಟತೆಯಿಂದ ಯೋಚಿಸಬಲ್ಲರೋ, ಎಲ್ಲಿ ದೇಹವಾಗಲೀ ಮನಸ್ಸಾಗಲೀ ದಮನಕ್ಕೆ ಒಳಗಾಗಿಲ್ಲವೋ ಅಂತಹ ಸಮಾಜವನ್ನು ಸೃಷ್ಟಿಸಲು ಹೋರಾಟ ನಡೆಸುವುದೇ ಭಗತ್ ಸಿಂಗ್ ರ ರಾಷ್ಟ್ರವಾದ. ಧೈರ್ಯ ಮತ್ತು ಸ್ಪಷ್ಟವಾಗಿ ಚಿಂತಿಸಬಲ್ಲ ಸಂಸ್ಕೃತಿಯನ್ನು ಬೆಳೆಸುವುದೇ ಅವರ ರಾಷ್ಟ್ರವಾದ.

## ವಿಮರ್ಶೆ ಮತ್ತು ಮೌಲ್ಯಮಾಪನ

ಶಿಕ್ಷಣದ ಮೇಲೆ ಭಗತ್ ಸಿಂಗ್ ರ ಬದುಕು ಮತ್ತು ಚಿಂತನೆಯ ಪರಿಣಾಮಗಳು ಏನಾಗುತ್ತವೆ ಎಂಬುದನ್ನು ಗಮನಿಸುವ ಮೊದಲು, ಅದರಲ್ಲಿ ಏನಾದರೂ ಸಮಸ್ಯೆಗಳಿವೆಯೇ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳುವುದು ಒಳ್ಳೆಯದು. ಇಪ್ಪತ್ತಮೂರು ವರ್ಷಗಳಷ್ಟು ಚಿಕ್ಕ ವಯಸ್ಸಿನಲ್ಲೇ ಕಾಲವಾದ ತರುಣ ಭಗತ್ ಸಿಂಗ್ ರಲ್ಲಿ ಚಿತ್ತಾಕರ್ಷಕವಾದ ಅನೇಕ ಸಂಗತಿಗಳಿವೆ. ಆದರೂ ನಾವು ಆತನ ಸುತ್ತ ನಾಯಕ ಆರಾಧನೆಯನ್ನು ಬೆಳೆಸಬಾರದು. ಆತನ ಚಿಂತನೆಯಲ್ಲಿ ಸಮಸ್ಯಾತ್ಮಕವಾದ ಏನನ್ನೂ ಕಾಣಲಾರದ ಭಕ್ತರು ನಾವಾಗಬಾರದು. ಅವರಲ್ಲಿ ಅನೇಕ ಸಮಸ್ಯೆಗಳಿವೆ, ಏಕೆಂದರೆ ಅವರೂ ಸಹ ಆ ಕಾಲದ ಸೃಷ್ಟಿಯಾಗಿದ್ದಾರೆ.

ಸಾಮಾಜಿಕ ಅಸಮಾನತೆಯ ಕುರಿತಾದ ಅವರ ವಿಶ್ಲೇಷಣೆಯು ಮೂಲಭೂತವಾಗಿ ಅವರ ಕಾಲದ ಮಾರ್ಕ್ಸ್ ವಾದಿ ವಿಶ್ಲೇಷಣೆಯೇ ಆಗಿತ್ತು ಎಂಬುದನ್ನು ನಾವಿಂದು ಗಮನಿಸಬಹುದು. ಅವರ ಕೃತಿಗಳಲ್ಲಿ ಸಾಮಾಜಿಕ ವರ್ಗಗಳ ಮತ್ತು ಅವುಗಳ ಕ್ರಾಂತಿಕಾರಿ ಅಂತಃಶಕ್ತಿಯ ಸರಳೀಕೃತ ವಿಶ್ಲೇಷಣೆಯಿದೆ. ಅವರ ಚಿಂತನಾ ಚೌಕಟ್ಟಿನಲ್ಲಿ ಜಾತಿಯ ಪಾತ್ರವು ದುರ್ಬಲವಾಗಿದೆ. ಗಂಡಾಳ್ವಿಕೆಯು (ಪಿತೃ ಪ್ರಾಧಾನ್ಯತೆಯ ವಿಶ್ಲೇಷಣೆ-ಅನುವಾದಕ) ಹೆಚ್ಚು ಕಡಿಮೆ ಸಂಪೂರ್ಣವಾಗಿ ಗೈರು ಹಾಜರಾಗಿದೆ. ಪ್ರಭುತ್ವ ಎಂದರೆ ಬಂಡವಾಳಶಾಹಿ ವರ್ಗದ ಕೈಗೊಂಬೆ ಎಂಬ

ಅಭಿಜಾತ ಮಾರ್ಕ್ಸ್ ವಾದಿ ನಿಲುವೇ ಅವರ ಪ್ರಭುತ್ವದ ಕುರಿತಾದ ಸಿದ್ಧಾಂತವೂ ಆಗಿದೆ. ಇಂದು ನಾವು ಅಂತಹ ಸರಳೀಕೃತ ಮಾದರಿಯಲ್ಲಿ ಯೋಚಿಸುವುದಿಲ್ಲ. ಇಷ್ಟಾಗಿ ಸಹ ಆತನ ಕೃತಿಗಳಲ್ಲಿ ಮತ್ತು ವಿಚಾರಗಳಲ್ಲಿ ಬಹಳಷ್ಟು ಅದ್ಭುತವಾದದ್ದಿದೆ. ನಾವು ಹೆಕ್ಕಿಕೊಂಡು ಕಾಯ್ದಿಟ್ಟುಕೊಳ್ಳಬೇಕಾದದ್ದು ಅವುಗಳನ್ನೇ. ಈ ಮುನ್ನೆಚ್ಚರಿಕೆಗಳೊಂದಿಗೆ ನಾವು ಇಂದಿನ ಭಾರತದ ಶಿಕ್ಷಣಕ್ಕೆ ಪ್ರಸ್ತುತವಾದದ್ದನ್ನು ಆತನಿಂದ ಕಲಿಯಲು ಪ್ರಯತ್ನಿಸೋಣ.

**ಶೈಕ್ಷಣಿಕ ಕಾರ್ಯಸೂಚಿಗಳು**

ಇಂದಿನ ಶಿಕ್ಷಣದ ಮೇಲೆ ಭಗತ್ ಸಿಂಗ್ ರ ವಿಚಾರಗಳಿಂದ ಆಗಬಹುದಾದ ಅನೇಕ ಪರಿಣಾಮಗಳಿವೆ. ಅವರಿಂದ ನಾವು ತೆಗೆದುಕೊಳ್ಳಬಹುದಾದ ಮೊದಲನೆಯ ಅಂಶವು, ಅವರು ಲಾಲಾ ರಾಮ್ ಶರಣ ದಾಸ್ ರವರ "ಡ್ರೀಂ ಲ್ಯಾಂಡ್" ಪುಸ್ತಕಕ್ಕೆ ಬರೆದ ಮುನ್ನುಡಿಯಿಂದ ಸಿಗುತ್ತದೆ. ಅಲ್ಲಿ ಅವರು ಭಾರತದಲ್ಲಿ ಉತ್ತಮ ಶಿಕ್ಷಣ ಪದ್ಧತಿಯನ್ನು ಕಟ್ಟಲಿಕ್ಕೆ ಮಾಡುವ ಪ್ರಯತ್ನವು ಏಕಕಾಲದಲ್ಲಿ ರಾಜಕೀಯ ಹೋರಾಟವೂ ಆಗಿರಬೇಕಾಗುತ್ತದೆ ಎಂದು ನಮ್ಮನ್ನು ಎಚ್ಚರಿಸುತ್ತಾರೆ. ಸಮಾನತೆ ಮತ್ತು ನ್ಯಾಯ ಸಿಗುವ ಹೊಸ ಜಗತ್ತನ್ನು ಕೇವಲ ಶಿಕ್ಷಣದಿಂದ ಮಾತ್ರ ಸೃಷ್ಟಿಸಲು ಸಾಧ್ಯ ಎಂಬುದನ್ನು ಅವರು ಒಪ್ಪಿಕೊಳ್ಳುತ್ತಾರೆ. ಆದರೆ ಅಂತಹ ಶಿಕ್ಷಣ ವ್ಯವಸ್ಥೆಯನ್ನು ಸೃಷ್ಟಿಸುವುದು ಹೇಗೆ? ಜಗತ್ತಿನಲ್ಲಿರುವ ಶೋಷಣೆ ಮತ್ತು ದಬ್ಬಾಳಿಕೆಯ ವ್ಯವಸ್ಥೆಗಳು ಅಂತಹ ಶಿಕ್ಷಣ ಅಥವಾ ಸಂಸ್ಕೃತಿಗಳು ಹೊರಹೊಮ್ಮಲು ಬಿಡುವುದಿಲ್ಲ. ಅವುಗಳನ್ನು ರಾಜಕೀಯವಾಗಿ (ಸಶಸ್ತ್ರ ಹೋರಾಟದ ಮೂಲಕ ಸಹ) ವಿರೋಧಿಸಬೇಕು. ಆನಂತರ ಮಾತ್ರವೇ ಜನಗಳಲ್ಲಿ ಜ್ಞಾನೋದಯವನ್ನು ಉಂಟುಮಾಡಿ ಅವರ ಮನಸ್ಸುಗಳನ್ನು ತೆರೆಯಬಲ್ಲ ಶಿಕ್ಷಣವನ್ನು ಸೃಷ್ಟಿಸುವುದು ಸಾಧ್ಯವಾಗುತ್ತದೆ.

ಅವರಿಂದ ನಾವು ಸ್ವೀಕರಿಸಬಹುದಾದ ಎರಡನೆಯ ಅಂಶವೆಂದರೆ, ಶಿಕ್ಷಣವು ದಬ್ಬಾಳಿಕೆಯಿಂದ ಸ್ವಾತಂತ್ರ್ಯವನ್ನು ಪಡೆಯುವುದರ ಕುರಿತಾಗಿ ಇರಬೇಕು. ಅದು ಧೈರ್ಯ ಮತ್ತು ಸ್ಪಷ್ಟವಾಗಿ ಆಲೋಚಿಸುವುದನ್ನು ಕಲಿಸಬೇಕು. ಶೋಷಣೆಯ ಸಂಕೋಲೆಗಳಿಂದಲೂ, ಉಸಿರುಗಟ್ಟಿಸುವ ಚಿಂತನಾಲಹರಿಯಿಂದಲೂ ಜನರನ್ನು ಬಿಡುಗಡೆಗೊಳಿಸುವ ಗುರಿಯನ್ನು ಅದು ಹೊಂದಿರಬೇಕು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಅದು ವಿಮೋಚನಾಶೀಲ ಶಿಕ್ಷಣವಾಗಿರಬೇಕು. ಭಗತ್ ಸಿಂಗ್ ರು ಇಲ್ಲಿ ಪಾಲೊ ಫ್ರೇ ಮತ್ತು ಜ್ಯೋತಿ ಬಾ ಫುಲೆ ಅವರ ಸಂಪ್ರದಾಯದಲ್ಲೇ

ನಿಂತಿರುವುದನ್ನು ನಾವು ಕಾಣುತ್ತೇವೆ, ನಾವು ಯಾವುದನ್ನು ಇಂದು ವಿಮರ್ಶಾತ್ಮಕ ಬೋಧನಾ ವಿಜ್ಞಾನ ಎಂದು ಕರೆಯುತ್ತೇವೆಯೋ ಅದನ್ನೇ ಅವರು ಆಗ್ರಹಿಸುತ್ತಿದ್ದಾರೆ.

ಆದರೆ ಇಂದಿನ ದಿನಗಳಲ್ಲಿ ನಾವು ಇದನ್ನು ಶಾಲೆಯ ಪಠ್ಯಕ್ರಮದಲ್ಲಿ ಮತ್ತು ಬೋಧನಾ ಅಭ್ಯಾಸಗಳಲ್ಲಿ ಕಾಣುವುದು ಅಪರೂಪ. ನಾನು ಸಮಾಜ ವಿಜ್ಞಾನದ ಪಠ್ಯಪುಸ್ತಕಗಳಲ್ಲಿ ಕಂಡುಬರುವ ಕೆಲವು ಉತ್ತಮವಾದ ಮತ್ತು ಕೆಲವು ಅಷ್ಟೇನೂ ಚೆನ್ನಾಗಿಲ್ಲದ ಅಂಶಗಳ ಉದಾಹರಣೆಯನ್ನು ಕೊಡುತ್ತೇನೆ. ನಾವು ಅವುಗಳನ್ನು ನೋಡುವಾಗ ಅದರಲ್ಲಿ ಭಗತ್ ಸಿಂಗ್ ರವರ ಭಾವಚಿತ್ರ ಇದೆಯೋ ಇಲ್ಲವೋ ಎಂಬುದನ್ನು ಗಮನಿಸಲು ಹೋಗುವುದಿಲ್ಲ. ಬದಲಿಗೆ ನಾವು ಅದರಲ್ಲಿ ವಿಮೋಚನೆ, ಮನಸ್ಸನ್ನು ಮುಕ್ತಗೊಳಿಸುವುದು ಮತ್ತು ಸಾಮಾಜಿಕ ಅಸಮಾನತೆಗಳನ್ನು ಮೀರುವುದು ಇವುಗಳ ಬಗ್ಗೆ ಒತ್ತು ನೀಡಲಾಗಿದೆಯೋ ಇಲ್ಲವೋ ಎಂಬುದನ್ನು ಗಮನಿಸುತ್ತೇವೆ. ಪ್ರಾಯಶಃ ಭಗತ್ ಸಿಂಗ್ ರ ರಾಷ್ಟ್ರವಾದಕ್ಕೆ ತುಂಬಾ ಹತ್ತಿರ ಬರುವುದೆಂದರೆ ಎನ್ ಸಿ ಎಫ್ 2005 ಎನ್ ಸಿ ಇ ಆರ್ ಟಿ ನಂತರದ ಪಠ್ಯಪುಸ್ತಕಗಳು ಮತ್ತು ಏಕಲವ್ಯ ಹಾಗೂ ಕೇರಳ, ಚತ್ತಿಸ್ ಘರ್ ಸರ್ಕಾರಗಳು ತಯಾರಿಸಿದ ಪಠ್ಯಗಳು. ಎನ್ ಸಿ ಇ ಆರ್ ಟಿ ಯ 8ನೇ ತರಗತಿಯ 'ಸಾಮಾಜಿಕ ಮತ್ತು ರಾಜಕೀಯ ಬದುಕು' (ಸೋಷಿಯಲ್ ಅಂಡ್ ಪೊಲಿಟಿಕಲ್ ಲೈಫ್) ಪುಸ್ತಕದಲ್ಲಿರುವ ಒಂದು ಅಧ್ಯಾಯವು 'ಸಮಾನತೆ'ಯ ಕುರಿತಾಗಿದ್ದು ಅದು ಈಗಿನ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಬಹಳ ಪ್ರಸ್ತುತವಾಗಿದೆ. ಈ ಅಧ್ಯಾಯದಲ್ಲಿ ನಾವೆಲ್ಲರೂ ನಮ್ಮ ಮತವನ್ನು ಚಲಾಯಿಸಲು ಒಂದೇ ಸಾಲಿನಲ್ಲಿ ಸಮಾನರಾಗಿ ನಿಲ್ಲುತ್ತೇವೆ ಎಂಬುದನ್ನು ಸಂಭ್ರಮಿಸಲಾಗಿದೆ. ಆದರೆ ಅದರ ಆಚೆಗೆ ನಾವು ಅನೇಕ ಅಸಮಾನತೆಗಳನ್ನು ಎದುರಿಸುತ್ತಿದ್ದೇವೆ ಎಂಬ ಅಂಶದ ಕಡೆಗೂ ಮಕ್ಕಳ ಗಮನವನ್ನು ಸೆಳೆಯುತ್ತದೆ. ಚಿತ್ರದಲ್ಲಿರುವ ಮಹಿಳೆಯು ಒಂದು ಕಾಯಿಲೆಯಿರುವ ಮಗುವನ್ನು ಎತ್ತಿಕೊಂಡಿದ್ದಾಳೆ. ಆದರೆ ಸಂಜೆ ಕೆಲಸದಿಂದ ಮನೆಗೆ ಹಿಂತಿರುಗಿ ಮಗುವನ್ನು ವೈದ್ಯರ ಬಳಿ ಕರೆದುಕೊಂಡು ಹೋಗುವವರೆಗೂ ಆಕೆ ಕಾಯಬೇಕು, ಬೇರೆ ದಾರಿ ಇಲ್ಲ. ಖಾಯಿಲೆಯ ಕಾರಣ ಏನೆಂಬುದು ಆಕೆಗೆ ಗೊತ್ತಿದೆ-ಅದೆಂದರೆ ಆಕೆ ವಾಸಿಸುವ ಕೊಳೆಗೇರಿಯಲ್ಲಿರುವ ಕೊಳಕಾದ ಬದುಕುವ ಪರಿಸ್ಥಿತಿಗಳು. ಆದರೂ ಆಕೆ ಅಸಹಾಯಕಳು ಏಕೆಂದರೆ ಅದನ್ನು ಬಗೆಹರಿಸಲು ಏನು ಮಾಡಬೇಕೆಂಬುದನ್ನು ಆಕೆ ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಇಲ್ಲಿ ನಾವು ಕಾಣುವ ದೃಷ್ಟಿಕೋನವು ಭಗತ್ ಸಿಂಗ್ ರ

ಆಲೋಚನೆಯೊಂದಿಗೆ ಸ್ಪಂದಿಸುವಂಥದ್ದು. ಅದು ನಮ್ಮ ಸಮಾಜದಲ್ಲಿನ ಅಸಮಾನತೆಗಳತ್ತ ನಮ್ಮ ಗಮನವನ್ನು ಸೆಳೆಯುತ್ತದೆ ಮತ್ತು ಅದರ ಬಗ್ಗೆ ನಾವೇನು ಮಾಡಬಹುದು ಎಂದು ತುರ್ತಾದ ದನಿಯಲ್ಲಿ ಕೇಳುತ್ತದೆ.

ಎನ್ ಸಿ ಇ ಆರ್ ಟಿ ಪಠ್ಯಪುಸ್ತಕಗಳು ವಾಸ್ತವದಲ್ಲಿ ಹತ್ತನೆಯ ತರಗತಿಯವರೆಗೂ ಭಗತ್ ಸಿಂಗ್ ರ ಬಗ್ಗೆ ಚರ್ಚಿಸುವುದಿಲ್ಲ ಎಂಬುದನ್ನು ನಾವು ಗಮನಿಸಬೇಕಾದದ್ದು ಅಗತ್ಯ. ಆತನ ಮೌಲ್ಯಗಳನ್ನು ಹಂಚಿಕೊಳ್ಳಬೇಕೆಂದರೆ ಆತನ ಬಗ್ಗೆಯೇ ಮಾತನಾಡಬೇಕು ಎಂದೇನೂ ಇಲ್ಲ. ಆದರೆ ನಾವು ನೋಡುವ ಅನೇಕ ಉದಾಹರಣೆಗಳೆಂದರೆ ಶಾಲೆಗಳಲ್ಲಿ ಭಗತ್ ಸಿಂಗ್ ರ ಬಗ್ಗೆ ಹಾಡು ಮತ್ತು ನೃತ್ಯಗಳ ಕಾರ್ಯಕ್ರಮವನ್ನು ನಡೆಸಲಾಗುತ್ತದೆ, ಆದರೆ ಅದರಿಂದ ಆತ ಏನನ್ನು ಮಾಡಹೊರಟಿದ್ದ ಎಂಬುದು ಅರ್ಥವೇ ಆಗಿರುವುದಿಲ್ಲ. ನಾವು ಇಲ್ಲಿ ಇನ್ನೊಂದು ಶಾಲಾ ಪಠ್ಯದ ಆಯ್ದ ಭಾಗದ ಚಿತ್ರವನ್ನು ಹಾಕಿದ್ದೇವೆ. ಇದು ಭಗತ್ ಸಿಂಗ್ ರ ಬಗ್ಗೆ ಮಾತನಾಡುತ್ತದೆ, ಆದರೆ ಅದರ ಸಂಕಥನ ಎಂಥ ಒಣಪಾಂಡಿತ್ಯದ್ದೆಂದರೆ ಭಗತ್ ಸಿಂಗ್ ಬದುಕಿದ್ದು ಮತ್ತು ಸತ್ತದ್ದು ಯಾತಕ್ಕಾಗಿ ಎಂಬುದು ಮಗುವಿಗೆ ಅರ್ಥವೇ ಆಗುವುದಿಲ್ಲ. ಭಗತ್ ಸಿಂಗ್ ರ ವೈಚಾರಿಕತೆಯನ್ನು ಇಲ್ಲಿ ನಿಖರವಾಗಿ, ಬಿಗಿಯಾದ ಭಾಷೆಯಲ್ಲಿ ಹೇಳಲಾಗಿದೆ. ಆದರೂ ಅದು ನಿರುಪಯುಕ್ತ. ಏಕೆಂದರೆ ಅದರ ವಿಶಾಲ ಅರ್ಥ ಮತ್ತು ಬೋಧನಾ ವಿಜ್ಞಾನಗಳು ವಾಸ್ತವದಲ್ಲಿ ಇಲ್ಲಿ ಹೇಳಿರುವುದಕ್ಕೆ ತದ್ವಿರುದ್ಧವಾಗಿರುತ್ತದೆ.

ಆತನ ಬಗ್ಗೆ ನಾವು ಹಾಡುವ ಗೀತೆಗಳು ಮತ್ತು ನಾವು ಆತನನ್ನು ಸ್ಮರಿಸುವ ರೀತಿಗಳ ಬಗ್ಗೆ ನನಗಿರುವ ಬೇಸರ ಏನೆಂದರೆ, ಅದರಲ್ಲಿ ನಾವು ಏನನ್ನು ಅಮೂಲ್ಯವೆಂದು ಕಾಣುತ್ತೇವೋ ಅದೆಲ್ಲವೂ ಆತನ ಹಿಂಸೆ ಮತ್ತು ಆರಂಭಕಾಲದ ಬಲಿದಾನದ ಪಂಥದ ಕುರಿತಾಗಿರುವಂಥದ್ದು. ನಾವು ಮರೆವಿಗೆ ತಳ್ಳುವುದು ಆತನ ವಿಚಾರಪರತೆ, ಸಾಮಾಜಿಕ ಸಮಾನತೆಯ ಕುರಿತು ಆತನಿಗಿದ್ದ ಬದ್ಧತೆ, ಆತನ ಜ್ಞಾನದ ವೈಶಾಲ್ಯ.

ಭಗತ್ ಸಿಂಗ್ ರಿಗೆ ಸಂಬಂಧಿಸಿದಂತೆ ಈ ದೇಶವು ಏನನ್ನು ನೆನಪಿನಲ್ಲಿಟ್ಟುಕೊಂಡಿದೆ ಮತ್ತು ಆತ ಏನನ್ನು ಹೇಳಲು ಹೊರಟಿದ್ದ ಎಂಬುದನ್ನು ಗಮನಿಸಿದಾಗ ಭಗತ್ ಸಿಂಗ್ ರಿಗೆ ಪ್ರಿಯವಾಗಿತ್ತು ಎನ್ನಲಾದ ಘಾಲಿಬ್ ಕವಿಯ ಕವಿತೆಯೊಂದು ಜ್ಞಾಪಕವಾಗುತ್ತದೆ.

ಓಹ್ ದೇವರೇ, ಅವರಿಗೆ ನಾನು ಹೇಳಿದ್ದು ಅರ್ಥವಾಗಿಲ್ಲ,

ಅವರು ಅರ್ಥಮಾಡಿಕೊಳ್ಳುವುದೂ ಇಲ್ಲ,

ನನಗೆ ಸ್ಪಷ್ಟವಾದ ಮಾತುಗಳನ್ನು ಕೊಡಲಾಗದಿದ್ದರೂ

ಅವರಿಗೆ ವಿಶಾಲವಾದ ಹೃದಯವನ್ನಾದರೂ ಕೊಡು.

## ಉಲ್ಲೇಖಿತ ಗ್ರಂಥಗಳು


- ಅಂಬೇಡ್ಕರ್. ಬಿ. ಆರ್ (1989) 'ರಾನಡೆ, ಗಾಂಧಿ ಅಂಡ್ ಜಿನ್ನಾ', ಡಾ. ಬಾಬಾ ಸಾಹೆಬ್ ಅಂಬೇಡ್ಕರ್, 'ರೈಟಿಂಗ್ಸ್ ಅಂಡ್ ಸ್ಪೀಚಸ್' (ಸಂಪುಟ 1, ಪುಟ 214-240) –ಸಂಪಾದಕರು, ವಿ. ಮೂನ್. ಮುಂಬೈ, ಶಿಕ್ಷಣ ಇಲಾಖೆ, ಮಹಾರಾಷ್ಟ್ರ ಸರ್ಕಾರ (ಮೂಲ ಪುಸ್ತಕದ ಪ್ರಕಟಣೆ 1943).
- ಬಕ್ಷಿ ಎಸ್ ಆರ್ 1988, 'ರೆವಲ್ಯೂಷನೆರಿಸ್ ಅಂಡ್ ದಿ ಬ್ರಿಟಿಷ್ ರಾಜ್', ನವದೆಹಲಿ, ಅಟ್ಲಾಂಟಿಕ್ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್.